

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ

Editor : MARUTI BASAVANTAPPA HOSAMANI

Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ

ಬಾಗಲಕೋಟೆಯಿಂದ ಪ್ರಕಟಿತ

RNI REG No. : KARKAN/2016/75068

SIHI KAHI

KANNADA DAILY MORNING

BAGALKOT

Volume : 06 Issue : 270 Friday 05-07-2024 E-mail : maruti.b.hosamani76@gmail.com Page: 4 Price : Rs. 1/-


## ನೀಡ್ ಬೇಸ್ ಇಂಡಿಯಾ ಟ್ರಸ್ಟ್ ಮುಖ್ಯಸ್ಥರಾದ ಪ್ರತಾಪ್ ಅವರಿಂದ 6, ನೋಟ್ ಪುಸ್ತಕಗಳನ್ನು ಉಚಿತವಾಗಿ ವಿತರಣೆ

**ಕಾಟಾಪೂರ :** ಸರಕಾರಿ ಪ್ರೌಢ ಶಾಲೆ ಕಾಟಾಪೂರದಲ್ಲಿ ನೀಡ್ ಬೇಸ್ ಇಂಡಿ–ಯಾ ಟ್ರಸ್ಟ್ ಮುಖ್ಯಸ್ಥರಾದ ಶ್ರೀ ಪ್ರತಾಪ್ ಸರ್ ರವರು ಪ್ರೌಢ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರತಿಯೊಬ್ಬರಿಗೆ 6 ನೋಟ್ ಪುಸ್ತಕಗಳನ್ನು ಉಚಿತವಾಗಿ ವಿತರಣೆ ಮಾಡಿದರು. ಈ ಸಂದರ್ಭದಲ್ಲಿ ಊರಿನ ಪ್ರಮುಖರಾದ ಶ್ರೀ ಶಂಕ್ರಪ್ಪ ಹಳ್ಳೂರ. ಶ್ರೀ ಈರಪ್ಪ ಹಾದಿಮನಿ. ಹಾಗೂ ಮಾಜಿ ತಾಲೂಕು ಪಂಚಾಯಿತಿ ಅಧ್ಯಕ್ಷರಾದ ಶ್ರೀ ಸಿದ್ಧಣ್ಣ ಆವಿನ. ಶ್ರೀ ಮಹಾಂತೇಶ ಜಗ್ಗಲ. ಗ್ರಾಮ ಪಂಚಾಯತ ಸದಸ್ಯರಾದ ಶ್ರೀ ಬಸವರಾಜ ಆವಿನ. ಶ್ರೀ ಹನಮಂತಪ್ಪ ತೂಗದೆಲಿ. ಇವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಲಾ ಪ್ರಭಾರಿ ಮುಖ್ಯೋಪಾಧ್ಯಾಯರಾದ ಶ್ರೀ ಮಲ್ಲಪ್ಪ ಹೆಬ್ಬಾಳ ವಹಿಸಿದ್ದರು. ಈ




ಕಾರ್ಯಕ್ರಮದ ಮುಖ್ಯರುವಾರಿಗಳಾದ ಹಾಗೂ ಈ ಕೊಡುಗೆಗೆ ಕಾರಣಿಕರ್ತರಾದ ಶ್ರೀ ವಿಜಯಕುಮಾರ ಮೈತ್ರಿ ಸರ್ ರವರು ಪ್ರಾಸ್ತಾವಿಕ ನುಡಿಗಳನ್ನು ಮಾತನಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಶ್ರೀ ಈರಣ್ಣ ಕೊಟ್ರಣ್ಣವರ ಮಾಡಿದರು. ಈ ಸಮಯದಲ್ಲಿ ಸರಕಾರಿ ಕಿರಿಯ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಬಸವಲಿಂಗಯ್ಯ ಹಿರೇಮಠ. ಹಾಗೂ ಶಿಕ್ಷಕರಾದ ಶ್ರೀ ಮಲ್ಲಪ್ಪ ಚಕ್ಕಡಿ ಶ್ರೀ ವಿಕ್ರಾಂತ ಗಜೇಂದ್ರಗಡ. ಶ್ರೀ ಶಿವಪ್ಪ ರಾಮದುರ್ಗ. ಶ್ರೀ ಪರಪ್ಪ ಅತನಿ. ಶ್ರೀ ಅಯ್ಯಪ್ಪ ರವರು ಕಾರ್ಯಕ್ರಮದಲ್ಲಿ ಹಾಗೂ ಶಾಲಾ ಎಲ್ಲಾ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## "ಆರೋಗ್ಯ ಸಿಂಚನ" ವೈಯಕ್ತಿಕ ಸ್ವಚ್ಛತೆ ಜಾಗೃತಿ

**ಬಾಗಲಕೋಟೆ :** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ಬಾಗಲಕೋಟೆ ಸಾರ್ವಜನಿಕ ಶಿಕ್ಷಣ ಇಲಾಖೆ ಬಾಗಲಕೋಟೆ ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ ಉಪ ಕೇಂದ್ರ ಬೆನಕಟ್ಟಿ ವ್ಯಾಪ್ತಿಯ ಹೊನ್ನಾಕಟ್ಟಿ. ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕಶಾಲೆಯಲ್ಲಿ,"ಆರೋಗ್ಯ ಸಿಂಚನ" ಸಾಂಕ್ರಾಮಿಕ ರೋಗಗಳ ತಡೆಗೆ ಮುಂಜಾಗ್ರತೆಯ ಆರೋಗ್ಯ ಅರಿವು ಜಾಗೃತಿ ಆಯೋಜಿಸಲಾಗಿತ್ತು. ಶಾಲಾ ಮುಖ್ಯ ಶಿಕ್ಷಕ ಎಸ್ ವಿ ದೇವಸಂಗಿ, ಆರೋಗ್ಯ ನಿರೀಕ್ಷಣಾಧಿಕಾರಿ ಎಸ್ ಎಸ್ ಅಂಗಡಿ, ಸೊಳ್ಳೆಗಳ ಕಚ್ಚುವಿಕೆಯಿಂದ ಸಾಂಕ್ರಾಮಿಕ ರೋಗಗಳ ತಡೆಗೆ ಮುಂಜಾಗ್ರತೆ ಕ್ರಮಗಳ ಪಾಲನೆ ಕುರಿತು ಕರಪತ್ರ ಬಿಡುಗಡೆಮಾಡುವಮುಖಾಂತರ



ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಳೆಗಾಲದಲ್ಲಿ ಸಾಂಕ್ರಾಮಿಕವಾಗಿ ಹರಡುವ ಮಲೇರಿಯಾ, ಡೆಂಗ್ಯೂ, ಚಿಕೂನ್ ಗುನ್ಯಾ, ಆನೆಕಾಲು ರೋಗ, ಮೆದುಳು ಜ್ವರ, ಹಾಗೂ ವಾಂತಿ ಬೇಧಿ, ತಡೆಗೆ ನಾವೆಲ್ಲರೂ ಮುಂಜಾಗ್ರತೆ ಕ್ರಮಗಳ ಪಾಲಿಸುವುದು ಕಡ್ಡಾಯ. ಸೊಳ್ಳೆ ಉತ್ಪತ್ತಿ ತಾಣಗಳು ಬೆಳೆಯದಂತೆ ನೋಡಿ ಕೊಳ್ಳಬೇಕು ಸೊಳ್ಳೆ ಪರದೆ ನಿರೋಧಕ ಬಳಸಬೇಕು ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳಿಕೆ ಹಾಕಬೇಕು ಮನೆ ಸುತ್ತ ಮುತ್ತ ಟಾಯರ್ ಟ್ಯೂಬ್, ಟೆಂಗಿನ ಚಿಪ್ಪು ಒಡೆದ ಬಾಟಲ್, ಕಸ ವಿಲೇವಾರಿ ಮಾಡಬೇಕು ಸುತ್ತ ಮುತ್ತ ಪರಿಸರ ಸ್ವಚ್ಛತೆ ಕಾಪಾಡಿ ಕೊಳ್ಳಬೇಕು ಪೋಷಕಾಂಶ ಯುಕ್ತ ಆಹಾರ ಸೇವನೆ ಮಾಡಬೇಕು ಶುದ್ಧ ನೀರು ಸೇವನೆ ನೀರು ಕಾಸಿ ಸೋಸಿ ಕುಡಿಯಬೇಕು. ನಮ್ಮ ಆರೋಗ್ಯ ನಮ್ಮ ಕೈಯಲ್ಲಿ ಆರೋಗ್ಯವಂತ ಕುಟುಂಬ ಸಮಾಜಕ್ಕಾಗಿ ಆರೋಗ್ಯ ಇಲಾಖೆಯ ಮುಂಜಾಗ್ರತೆ ಕ್ರಮಗಳ ಪಾಲನೆ ಮಾಡಬೇಕು ವಯೋವೃದ್ಧರು ಚಿಕ್ಕ ಮಕ್ಕಳು ಗರ್ಭಿಣಿಯರು ಬಾಣಂತಿಯರು ಸೊಳ್ಳೆ ಪರದೆ ಬಳಸಬೇಕು. ಡೆಂಗ್ಯು ಮಹಾಮಾರಿ ತಡೆಗೆ "ಈಡೀಜ್ ಇಜಿಪ್ತೆ" ಲಾರ್ವಾ ಮುಕ್ತಕ್ಕಾಗಿ ಎಲ್ಲರೂ ಕೈಜೋಡಿಸಿ ಆರೋಗ್ಯವಂತ ಸಮಾಜ ಕಟ್ಟೋಣ ಎಂದು ಕರೆ ಕೊಟ್ಟರು. ಶಾಲಾ ಆರೋಗ್ಯ ಸಿಂಚನ ಅರಿವು ಜಾಗೃತಿ ಕಾರ್ಯಕ್ರಮದಲ್ಲಿ ಶಾಲಾ ಗುರು ಮಾತೆಯರಾದ ಎಮ್ ಎನ್ ಬಿರಾದಾರ, ಅಶ್ವಿನಿ ಕಳ್ಳಿಮಠ, ಎಲ್ ವಿ ನಾಗಸಂಪಗಿ, ಸಹ ಶಿಕ್ಷಕ ಕೆ ಎ ಮಬ್ರುಮಕರ ಆರೋಗ್ಯ ಅಧಿಕಾರಿಗಳು ಆಶಾ ಕಾರ್ಯಕರ್ತೆಯರು ಶಾಲಾ ಮಕ್ಕಳು ಭಾಗವಹಿಸಿದ್ದರು.




## ಬ್ಯಾಡ್ ಸ್ಟೋರಿ ಯೂಟ್ಯೂಬ್ ಚಾನೆಲ್ ಬಿಡುಗಡೆ

**ಬೆಂಗಳೂರು :** ಮನೀಶ್ ಶೆಟ್ಟಿ ನಿರ್ದೇಶನದ 15 ನೇ ಕನ್ನಡ ಕಿರುಚಿತ್ರ ಜುಲೈ 12 ರಂದು ಮನೀಶ್ ಶೆಟ್ಟಿ ಯೂಟ್ಯೂಬ್ ಚಾನೆಲ್ ಅಲ್ಲಿ ಬಿಡುಗಡೆ ಯಾಗಲಿದೆ. ಮನೀಶ್ ಶೆಟ್ಟಿ ನಿರ್ದೇಶನದ ಬ್ಯಾಡ್ ಸ್ಟೋರಿ ಕಿರು ಚಿತ್ರದಲ್ಲಿ ಸಸ್ಪೆನ್ಸ್, ಥ್ರಿಲ್ಲರ್ ಕಥಾ ಹಂದರ ಹೊಂದಿರುವ ಈ ಚಿತ್ರದ ಫಸ್ಟ್ ಲುಕ್ ಈಗಾಗಲೇ ಸಾಕಷ್ಟು ಕುತೂಹಲ ಕೆರಳಿಸಿದ್ದು, ನಿರೀಕ್ಷೆ ಮೂಡಿಸಿದೆ ನಾಯಕನೋ, ಖಳನಾಯಕನೋ ಅನ್ನೋದು ಕೊನೆವರೆಗೂ ಕುತೂಹಲದಲ್ಲಿ ಚಿತ್ರವನ್ನು ನೋಡುವಂತೆ ಮಾಡುತ್ತದೆ.

ಮನೀಶ್ ಶೆಟ್ಟಿ ಅವರ 15 ನೇ ಕಿರುಚಿತ್ರ ಇದಾಗಿದ್ದು, ಸ್ವತಃ ಅವರೇ ಕಥೆ ಬರೆದು, ಅಭಿನಯ ಮಾಡುವುದರೊಂದಿಗೆ ನಿರ್ದೇಶಕನ ಕ್ಯಾಪ್ ಕೂಡ ತೊಟ್ಟಿದ್ದಾರೆ. ಇವರಿಗೆ ಕಲಾವಿದರಾಗಿ ಇಮ್ರಾನ್ ಎಸ್.ಕೆ, ಮುರುಳಿ, ಮೌನೇಶ್ ರಾಠೋಡ್, ಚಂದನ್, ಲಕ್ಷಿತ ಪೂಜಾರಿ ಕೂಡ ಸಾಥ್ ನೀಡಿದ್ದಾರೆ.

ಜೊತೆಗೆ ಸಂಗೀತ ನಿತೇಶ್ ಹರ್ಶ, ಛಾಯಾಗ್ರಾಹಕ ಮೋಹನ್ ರಾಜು, ಲಿರಿಕ್ಸ್ ಜೋಸ್ಲಿನ್ ಗಾಂಜಾ, ಮರ್ಡರ್ ಸುತ್ತ ಈ ಚಿತ್ರದ ಕಥೆ ಸಾಗುತ್ತದೆ. ಮೂವಿ ಕ್ಯಾಪ್ಚರ್ ಸ್ಟುಡಿಯೋ ಚಿತ್ರವನ್ನು ಪ್ರಸ್ತುತ ಪಡಿಸುತ್ತಿದೆ. ಎಲ್ಲಾ ಪ್ರೇಕ್ಷಕರು ಈ ಕಿರುಚಿತ್ರ ನೋಡಿ ತಮ್ಮನ್ನು ಹರಸುವಂತೆ ಚಿತ್ರತಂಡದವರು ಮನವಿ ಮಾಡಿದ್ದಾರೆ.

## ಗೌಡಳ್ಳಿಯಲ್ಲಿ ಚಿನ್ನದ ಚೈನ್ ಕಳ್ಳತನ ಮಾಡಿರುವ ಕಳ್ಳನನ್ನು ಹಿಡಿದ ಪೋಲಿಸ್ ಇಲಾಖೆಗೆ ಹೃದಯ ಪೂರ್ವಕ ಧನ್ಯವಾದಗಳು

**ಗೌಡಳ್ಳಿ :** ಗೌಡಳ್ಳಿಯಲ್ಲಿ ಅಣ್ಣಯ್ಯ ಅವರ 30 ಗ್ರಾಂ ಚಿನ್ನದ ಚೈನ ರಾತ್ರಿ ಹೊತ್ತಿನಲ್ಲಿ ಬಂದು ಚೈನ್ ಅನ್ನು ಕಿತ್ತುಕೊಂಡು ಕಳ್ಳತನ ಮಾಡಿ ಹೋಗಿದ್ದರು ಆದರೆ ಈಗ ಕಳ್ಳರು ಸಿಕ್ಕಿಕೊಂಡಿದ್ದಾರೆ ಯಾರೆಂದರೆ ಶನಿವಾರಸಂತೆ ಕೆಇಬಿಯಲ್ಲಿ ಲೈನ್ ಮ್ಯಾನ್ ಕೆಲಸ ಮಾಡಿಕೊಂಡಿದ್ದ ಸಂದೀಪ್ ಎಂಬುವವರು ಈ ಕಳ್ಳತನ ಮಾಡಿದ್ದಾರೆ.



ಎಂಬುದು ಸಾಬೀತಾಗಿರುವುದು ಗೊತ್ತಾಗುತ್ತದೆ. ಹಾಗೂ ಈ ವ್ಯಕ್ತಿ ದಿನಾಲು ಇವರ ಮನೆಗೆ ಬಂದು ಹೋಗುತ್ತಿದ್ದರು. ಹಾಗಾಗಿ ಇವರ ಮನೆಯಲ್ಲಿ ಯಾರು ಇಲ್ಲ ಎಂದು ಖಾತರಿ ಪಡಿಸಿ ಕೊಂಡು ರಾತ್ರಿ ಹೊತ್ತಿನಲ್ಲಿ ಬಂದು ಈ ಕಳ್ಳತನ ಮಾಡಿರೋದು ಬೆಳಕಿಗೆ ಬಂದಿರುತ್ತದೆ. ಈ ವ್ಯಕ್ತಿಯನ್ನು ಪೊಲೀಸರು ಈಗಾಗಲೇ ಬಂಧಿಸಿರುತ್ತಾರೆ. ಹಾಗೂ ಕೆಇಬಿ ಲೈನ್ ಮ್ಯಾನ್ ಸಂದೀಪ್ ಈ ವ್ಯಕ್ತಿ ಕದ್ದ ಚೇನನ್ನು ಅವರ ಊರಿನಲ್ಲಿ ಫೈನಾನ್ಸ್ ನಲ್ಲಿ ಅಡಾವ್ ಇಟ್ಟಿರುವುದು ಗೊತ್ತಾಗಿರುತ್ತದೆ. ಈ ಕಳ್ಳತನವನ್ನು ಭೇದಿಸಿದ ಪೋಲಿಸಿ ಇಲಾಖೆಯವರಿಗೆ ಹೃದಯ ಪೂರ್ವಕ ಧನ್ಯವಾದಗಳು ಅರ್ಪಿಸುತ್ತೇವೆ.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಎಂ.ಎಂ. ಶರ್ಮಾ ಬೆಳಗಾವಿ.**

## ಅನುಭಾವದಿಂದ ವ್ಯಕ್ತಿಯು ಮಹಾನುಭಾವ: ಸಿದ್ದು ದಿವಾಣ

**ಜಮಖಂಡಿ:** ಶರಣರನ್ನು ಮತ್ತು ಜನಪದವನ್ನು ಅರಿತುಕೊಳ್ಳಬೇಕಾದರೆ ಭಾವ, ಸ್ವಭಾವ, ಪ್ರಭಾವ, ಅನುಭಾವ ಮತ್ತು ಮಹಾನುಭಾವ ಪದಗಳನ್ನು ಚೆನ್ನಾಗಿ ಅರ್ಥೈಸಿಕೊಳ್ಳಬೇಕು ಎಂದು ಮುಧೋಳದ ಹಿರಿಯ ಸಾಹಿತಿ ಸಿದ್ದು ದಿವಾಣ ಹೇಳಿದರು.

ತಾಲ್ಲೂಕಿನ ಹುಲ್ಯಾಳ ಗ್ರಾಮದ ಶ್ರೀಗುರುದೇವಾಶ್ರಮದ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಹಮ್ಮಿಕೊಂಡಿದ್ದ 'ಶ್ರೀಗುರುದೇವ ಸತ್ಸಂಗ' ತಿಂಗಳ ನಾಲ್ಕನೆಯ ಭಾನುವಾರದ ಮಾಸಿಕ ಕಾರ್ಯಕ್ರಮದಲ್ಲಿ 'ಶರಣರು ಮತ್ತು ಜನಪದೀಯ ಮೌಲ್ಯಗಳು' ಕುರಿತು ಅವರು ಅನುಭಾವ ಹಂಚಿಕೊಂಡರು. ಮನಸ್ಸಿನ ಭಾವವು ವ್ಯಕ್ತಿಯ ಸ್ವಭಾವವಾಗುತ್ತದೆ. ಸ್ವಭಾವದ ಪ್ರಭಾವದಿಂದ ಅನುಭಾವ ಉಂಟಾಗುತ್ತದೆ. ಅನುಭಾವ ವ್ಯಕ್ತಿಯನ್ನು ಮಹಾನುಭಾವನನ್ನಾಗಿಸುತ್ತದೆ. ಆಚಾರಕ್ಕೆ ಅರಸನಾಗು ಎಂದು ಜನಪದರು ಹೇಳಿದ್ದಾರೆ. ಹಾಗೆಯೇ ಆಚಾರವೇ ಸ್ವರ್ಗ ಎಂದು ಬಸವಣ್ಣನವರು ತಿಳಿಸಿದ್ದಾರೆ ಎಂದರು.




ಶ್ರೀಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ಸಾನ್ನಿಧ್ಯ ವಹಿಸಿ ಮಾತನಾಡಿ, ಪ್ರಾಪಂಚಿಕ ಜೀವನಕ್ಕೆ ಬೇಕಾದ ಮೌಲ್ಯಗಳನ್ನು ಜನಪದರು ಕಟ್ಟಿಕೊಟ್ಟಿದ್ದಾರೆ. ಜೀವನದ ಮೂಲ ಉದ್ದೇಶ ಮತ್ತು ಅನುಭಾವ ಕುರಿತು ಆಧ್ಯಾತ್ಮಿಕ ಮೌಲ್ಯಗಳನ್ನು ಶರಣರು ತಮ್ಮ ವಚನಗಳ ಮೂಲಕ ಕಟ್ಟಿಕೊಟ್ಟಿದ್ದಾರೆ ಎಂದು ಆಶೀರ್ವಚನ ನೀಡಿದರು.

ಸಿದ್ದಾಪುರದ ಅಡವಿ ಮಠದ ಮಾತೋಶ್ರೀ ಮಹಾದೇವಿತಾಯಿ ಸಾನ್ನಿಧ್ಯ ವಹಿಸಿ ಮಾತನಾಡಿ, ಶರಣರು ಮಾಡಿದ ಆದೇಶ, ನೀಡಿದ ಸಂದೇಶ ಮತ್ತು ತಿಳಿಸಿದ ಬದುಕಿನ ಉದ್ದೇಶದಂತೆ ಬದುಕಿ ಜೀವನವನ್ನು ಸಾರ್ಥಕ ಮಾಡಿಕೊಳ್ಳಬೇಕು ಎಂದು ಆಶೀರ್ವಚನ ನೀಡಿದರು. ಕೃಷ್ಣಾ ಗಣಿ ಸ್ವಾಗತಿಸಿದರು. ಮಂಡಲೀಕ ಭಜಂತ್ರಿ ಕ್ಲ್ಯಾರಿನೆಟ್ ನುಡಿಸಿದರು. ಬಸವರಾಜ ಪಾಟೀಲ, ಪರಮೇಶ್ವರ ತೇಲಿ, ರಾಮಚಂದ್ರ ಹೂಗಾರ ಸಂಗೀತ ಸೇವೆ ಸಲ್ಲಿಸಿದರು. ಹುಲ್ಯಾಳದ ಸೋನವ್ವ ಜಾನಪದ ಗೀತೆ ಹಾಡಿದರು. ಪೃಥ್ವಿರಾಜ ಹೊನಗೌಡ ನಿರೂಪಿಸಿದರು.

## ಕರ್ನಾಟಕದಲ್ಲಿ ಏಕೈಕ ಅಗ್ನಿ ಸಾಲಿಗ್ರಾಮ ರೂಪೀ ಶಿವಲಿಂಗ (ಅಮೃತೇಶ್ವರ ದೇವಾಲಯ)

**ಅಜ್ಜಂಪುರ :** ಹೊಯ್ಸಳರ ಆಡಳಿತದಲ್ಲಿ ನಿರ್ಮಾಣವಾದ ಅದೆಷ್ಟೋ ಪುರಾತನ ದೇವಾಲಯಗಳು, ಐತಿಹಾಸಿಕ ಕ್ಷೇತ್ರಗಳು ನಮ್ಮ ಕರುನಾಡಿನಲ್ಲಿ ಕಂಡು ಬರುತ್ತವೆ.

ಕರ್ನಾಟಕವನ್ನು ಬಹುಕಾಲದವರೆಗೆ ಆಳಿದವರಲ್ಲಿ ಹೊಯ್ಸಳರೂ ಪ್ರಮುಖರು. ಗಂಗರು, ಕದಂಬರು ಮತ್ತು ಚಾಲುಕ್ಯರಂತೆ ಇವರೂ ಸಹ ಕನ್ನಡ ನಾಡಿನಾದ್ಯಂತ ಸುಮಾರು 92 ದೇವಾಲಯಗಳನ್ನು ಹೊಯ್ಸಳರು ನಿರ್ಮಿಸಿದ್ದಾರೆ. ವಿಶೇಷವಾಗಿ ಕರ್ನಾಟಕದಲ್ಲಿ ಏಕೈಕ "ಅಗ್ನಿ ಸಾಲಿಗ್ರಾಮ ಶಿವಲಿಂಗ" ಇರುವ ದೇವಾಲಯ ಅಮೃತೇಶ್ವರ ದೇವಾಲಯವೂ ಒಂದು.

ಚಿಕ್ಕಮಗಳೂರು ಜಿಲ್ಲೆಯ ತರೀ–ಕೆರೆ ತಾಲೂಕಿನಲ್ಲಿರುವ ಅಮೃತಪುರ (ಅಜ್ಜಂಪುರ) ಎಂಬ ಗ್ರಾಮದಲ್ಲಿರುವ ಅಮೃತೇಶ್ವರ ದೇವಾಲಯ ತನ್ನ ಭವ್ಯ ಶಿಲ್ಪಕಲಾ ಕೆತ್ತನೆ ಗಳಿಂದಾಗಿಯೇ ಜಗತ್ ಪ್ರಸಿದ್ಧಿ ಪಡೆದಿದೆ. ಹೊಯ್ಸಳರ ಆಡಳಿತದಲ್ಲಿ ನಿರ್ಮಿತವಾದಂತಹ ಅದ್ಬುತ ಶಿವ ದೇವಾಲಯಗಳಲ್ಲಿ ಅಮೃತಪುರದ ಅಮೃತೇಶ್ವರ ದೇವಾಲಯ ಮುಂಚೂಣಿಯಲ್ಲಿದೆ.

ಈ ದೇವಾಸ್ಥಾನವನ್ನು ಹೊಯ್ಸಳರ ದೊರೆ ವಿಷ್ಣುವರ್ಧನರ ಮೊಮ್ಮಗನಾದ ಎರಡನೇ ವೀರ ಬಲ್ಲಾಳನು ಕ್ರಿ. ಶ.1196 ರಲ್ಲಿ ನಿರ್ಮಿಸಿದ್ದಾರೆಂದು ಶಾಸನಗಳು ಉಲ್ಲೇಖಿಸುತ್ತವೆ. ಮೊದಲ ನೋಟದಲ್ಲಿಯೇ ಮೂಕ ವಿಸ್ಮಿತರಾಗುವಂತಹ ಶಿಲ್ಪಕಲಾ ಸಿರಿಯನ್ನು ಹೊಂದಿರುವ ಈ ದೇವಾಲಯ ಉಗಮಿಸಲು ಒಂದು ಇತಿಹಾಸವಿದೆ. ಆಗಿನ ಕಾಲದ ಹೊಯ್ಸಳ ಸಾಮ್ರಾಜ್ಯವು ದ್ವಾರ ಸಮುದ್ರದಿಂದ ದಕ್ಷಿಣ ದಿಕ್ಕಿಗೆ ತರೀಕೆರೆವರೆಗೂ ಹಬ್ಬಿತ್ತು. ಹೊಯ್ಸಳ ಸಾಮ್ರಾಜ್ಯದ ಎರಡನೇ ವೀರ ಬಲ್ಲಾಳನ ಮಹಾದಂಡ ನಾಯಕನಾಗಿದ್ದಂತಹ ಅಮತೀಯ ನಾಯಕರೊಬ್ಬರು ಅಪರಿಮಿತ ಶೂರರಾಗಿದ್ದರು. ಜೊತೆ ಜೊತೆಗೆ ಅವರು ಎರಡನೇ ವೀರ ಬಲ್ಲಾಳನ ಆಪ್ತರಾಗಿದ್ದರು ಅವರಿಗೆ ರಾಜರು ಪ್ರೀತಿಯಿಂದ ಅಮೃತದಂಡ ಎಂದು ನಾಮಕರಣ ಮಾಡಿದರು.

ಹೊಯ್ಸಳರು ಮತ್ತು ಕಡು ವೈರಿಗಳಾದ ಗುರ್ಜರರ ನಡುವೆ ಕ್ರಿ.ಶ 1192 ರ ಇಸವಿಯಲ್ಲಿ ಘನಘೋರ ಯುದ್ಧವೊಂದು ಜರುಗುತ್ತದೆ. ಆಗ ಅಮೃತದಂಡ ನಾಯಕರು ಗುರ್ಜರರ ವಿರುದ್ಧ ಧೈರ್ಯದಿಂದ ಕಾದಾಡಿ ಅವರನ್ನು ಹಿಮ್ಮೆಟ್ಟಿಸಲು ಸಫಲರಾದರೂ ಸಹ ತಮ್ಮ ಪ್ರಾಣವನ್ನು ಕಳೆದು ಕೊಳ್ಳಬೇಕಾಯಿತು, ತಮ್ಮ ಪರಮ ಸ್ನೇಹಿತನನ್ನು ಕಳೆದು ಕೊಂಡಂತಹ ಎರಡನೇ ವೀರ ಬಲ್ಲಾಳರು ತನ್ನ ಸ್ನೇಹಿತನ ನೆನಪಿಗಾಗಿಯೇ ಕ್ರಿ.ಶ 1196 ರಲ್ಲಿ ನಿರ್ಮಿಸಿದಂತಹ ಸುಂದರ ಕಲಾ



ಸಿರಿಯೇ ಅಮೃತಪುರದ ಅಮೃತೇಶ್ವರ ದೇಗುಲ.

ಈ ದೇಗುಲದಲ್ಲಿ 52 ಅಗರ್ವರ ಕಂಬಗಳು ಹಾಗೂ 250 ವಿಶಿಷ್ಟ ಕೆತ್ತನೆಯ ಸಣ್ಣ ಗೋಪುರಗಳಿವೆ.

ನಕ್ಷತ್ರಾಕಾರದಲ್ಲಿ ದೇವಾಲಯವನ್ನು ನಿರ್ಮಿಸಲಾಗಿದೆ, ಗರ್ಭ ಗುಡಿಯಲ್ಲಿರುವ ಅಮೃತೇಶ್ವರ ಶಿವಲಿಂಗವನ್ನು ನೇಪಾಳ ದೇಶದ ಗಂಡಕಿ ನದಿಯಿಂದ ತಂದಂತಹ ಅಗ್ನಿ ಸಾಲಿಗ್ರಾಮ ಶಿಲೆಯಿಂದ ನಿರ್ಮಿಸಲಾಗಿದೆ ಭಾರತದಲ್ಲಿ ಆರು ಅಗ್ನಿ ಸಾಲಿಗ್ರಾಮ ಶಿವಲಿಂಗಗಳಿವೆ. ನಮ್ಮ ಕರ್ನಾಟಕದಲ್ಲಿರುವ ಏಕೈಕ ಅಗ್ನಿ ಸಾಲಿಗ್ರಾಮ ಶಿವಲಿಂಗವೆಂದರೆ ಇದೇ ಅಮೃತೇಶ್ವರ ಶಿವಲಿಂಗ ಮಾತ್ರ.

ಅಗ್ನಿ ಸಾಲಿಗ್ರಾಮಕ್ಕೆ ಬ್ರಹ್ಮ, ವಿಷ್ಣು, ಮಹೇಶ್ವರರು ಶಕ್ತಿ ತುಂಬಲಾಗಿದೆ ಎಂದು ಶಾಸನಗಳಲ್ಲಿ ವಿವರಿಸಲಾಗಿದೆ. ಅಮೃತೇಶ್ವರ ಶಿವಲಿಂಗವನ್ನು ಮಕರ ಸಂಕ್ರಾಂತಿ ದಿನ ದಂದು ಪ್ರತಿಷ್ಠಾಪನೆ ಮಾಡಲಾಗಿದೆ. ಇದೇ ಕಾರಣಕ್ಕಾಗಿಯೇ ಪ್ರತಿ ವರ್ಷ ಮಕರ ಸಂಕ್ರಾಂತಿ ದಿನ ಸೂರ್ಯನ ಕಿರಣಗಳು ಅಮೃತೇಶ್ವರ ಶಿವಲಿಂಗವನ್ನು ನೇರವಾಗಿ ಸ್ಪರ್ಶಿಸುತ್ತವೆ ಇದೇ ಈ ದೇಗುಲದ ವೈಶಿಷ್ಟತೆ. ಈ ಸೋಜಿಗವನ್ನು ಕಣ್ತುಂಬಿ ಕೊಳ್ಳಲು ಭಕ್ತರು ಮಕರ ಸಂಕ್ರಾಂತಿಯಂದು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಾರೆ.

ಅಮೃತೇಶ್ವರ ದೇಗುಲದ ಮತ್ತೊಂದು ಸೋಜಿಗವೆಂದರೆ ಗರ್ಭ ಗುಡಿಯಲ್ಲಿರುವ ನಂದಾದೀಪ, ಮೊದಲು ನಂದಾ ದೀಪವನ್ನು ಮೈಸೂರು ಒಡೆಯರಾದ ಮುಮ್ಮಡಿ ಕೃಷ್ಣರಾಜ ಒಡೆಯರು ಬೆಳಗಿಸಿದ್ದರಂತೆ ಈ ನಂದಾದೀಪ ಒಮ್ಮೆಯೂ ಆರದಂತೆ ದೇಗುಲದ ಅರ್ಚಕರು ಕಾಪಾಡಿ ಕೊಂಡು ಬರುತ್ತಿದ್ದಾರೆ. ಈ ನಂದಾದೀಪಕ್ಕೆ ಎಣ್ಣೆಯನ್ನು ಅರ್ಪಿಸಿ ಅಮೃತೇಶ್ವರನ ಪೂಜಿಸಿದವರ ಬಾಳು ಅಮೃತಮಯವಾಗಿರುತ್ತದೆ ಎಂಬ ನಂಬಿಕೆ ಇದೆ.

ಈ ದೇಗುಲದಲ್ಲಿ ಶಾರದಾ ದೇವಿ, ಲಕ್ಷ್ಮಿ ದೇವಿ, ಪಾರ್ವತಿ ದೇವಿಗಳ ವಿಗ್ರಹಗಳು ಇವೆ. ದೇವಾಲಯದ ಸುತ್ತಲೂ ಇರುವಂತಹ ರಾಮಾಯಣ ಮತ್ತು ಮಹಾಭಾರತ ಹಾಗೂ ಭಾಗವತಗಳಿಗೆ ಸಂಬಂಧಿಸಿದಂತಹ ಕಥಾ ವಸ್ತುಗಳ ಶಿಲ್ಪಗಳು ಎಲ್ಲರನ್ನು ಸೆಳೆಯುತ್ತವೆ. ಈ ದೇವಾಲಯದ 4 ಎಕರೆ ವಿಶಾಲ ಪ್ರದೇಶವು ಕೇಂದ್ರ ಪುರಾತತ್ವ ಇಲಾಖೆಯ ಅಧೀನಕ್ಕೆ ಒಳಪಟ್ಟಿದೆ. ದೇವಾಲಯದ ಮುಂಭಾಗದಲ್ಲಿರುವ ಉದ್ಯಾನ ವನವು ಪ್ರವಾಸಿಗರಿಗೆ ಆಕರ್ಷಣೀಯ ಕೇಂದ್ರವಾಗಿದೆ.

* * *

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ. ಎಸ್.ವೀರೇಶ್. ಕೆ.ಹೊಸಹಳ್ಳಿ.**



## ಸಾಹಿತ್ಯ, ಸಂಸ್ಕೃತಿ ಮುಂದಿನ ಪೀಳಿಗೆಗೆ ಬಳುವಳಿಯಾಗಬೇಕು

**ರಾಮ ಮನಗೂಳಿ ವೇದಿಕೆ (ಬಾಗಲಕೋಟೆ):** ಕನ್ನಡ ಸಾಹಿತ್ಯ ಸಮ್ಮೇಳನಗಳು ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಡುವಲ್ಲಿ ಕಾರ್ಯಪ್ರವೃತ್ತವಾಗಿ ಕೆಲಸ ಮಾಡಬೇಕು ಎಂದು ಬೀಳಗಿ ಶಾಸಕ ಜೆ.ಟಿ.ಪಾಟೀಲ ಕರೆ ನೀಡಿದರು.

ನವನಗರ ಡಾ.ಬಿ.ಆರ್.ಅಂಬೇಡ್ಕರ ಭವನದಲ್ಲಿ ಹಮ್ಮಿಕೊಂಡಿರುವ ಬಾಗಲಕೋಟೆ ಜಿಲ್ಲಾ 11ನೇ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇಯ ದಿನದ ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಂಪರೆ ಮತ್ತು ಜನಪರ ನಿಲುವುಗಳು ಎಂಬ ವಿಷಯ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು

ಸಾಹಿತಿಗಳು ಮೌಲ್ಯಯುತವಾದ ಸಾಹಿತ್ಯ ರಚನೆ ಮಾಡಬೇಕು. ಜನಸಾಮಾನ್ಯರು ಓದುವ ಹವ್ಯಾಸ ಬೆಳೆಸುವಂತಿರಬೇಕು. ಜೊತೆಗೆ ಜಿಲ್ಲೆಯಲ್ಲಿ ಅನೇಕ ಸಮಸ್ಯೆಗಳಿರುತ್ತವೆ ಅವುಗಳನ್ನು ತಮ್ಮ ಬರಹದ ಮೂಲಕ ಸರ್ಕಾರದ ಗಮನ ಸೆಳೆಯುವ ಕೆಲಸವಾಗಬೇಕಿದೆ. ಮುಖ್ಯವಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಇದು ಸಂಪೂರ್ಣವಾಗಿ ಅನುಷ್ಠಾನವಾಗಿಲ್ಲ. ಈ ಯೋಜನೆಯ ಆರಂಭದಲ್ಲಿ 230 ಕೋಟಿ ಯೋಜನಾವೆಚ್ಚ ಇತ್ತು ಆದರೆ ಇಂದು ಲಕ್ಷಾಂತರ ಕೋಟಿ ಅನುದಾನ ನೀಡಿದರೂ




ಇದು ವರೆಗೂ ಪೂರ್ಣಗೊಂಡಿಲ್ಲ ಇಂತಹ ಸಮಸ್ಯೆಗಳ ಗಮನ ಸೆಳೆಯುವುದು ಇಂದು ತುರ್ತಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿಶ್ರಾಂತ ಪ್ರಾಚಾರ್ಯ ಡಾ.ಎಸ್.ಬಿ. ಮಾಟೊಳ್ಳಿ ಮಾತನಾಡಿ, ಇಂದಿನ ಗೋಷ್ಠಿಯಲ್ಲಿ ಮೌಲ್ಯಯುತವಾದ ವಿಷಯ ಮಂಡನೆ ಮಾಡಿದ್ದಾರೆ. ಸಾಹಿತಿಗಳಿಗೆ ಭಾಷಾ ಜ್ಞಾನವಿರಬೇಕು. ಒಳಗೂ, ಹೊರಗೂ ಸ್ವಚ್ಛ ಇರಬೇಕು. ಸಂಖ್ಯೆಗಿಂತ ಸತ್ವ ಇರಬೇಕು. ಆಸ್ವಾದ ಮಾಡುವಂತಹ ಮನೋಗುಣ ಹೊಂದಿರಬೇಕು ಎಂದು ಅವರು ಕರೆ ನೀಡಿದರು.

ಸಾಹಿತಿ ಎಂ.ಜಿ. ದಾಸರ ಅವರು ತತ್ವಪದ ಹಾಗೂ ಕೀರ್ತನೆಗಳು, ಸಾಹಿತಿ ಶಿವಾನಂದ ಪೂಜಾರಿ ವಚನ ಸಾಹಿತ್ಯ, ಕಸಾಪ ತಾಲೂಕಾಧ್ಯಕ್ಷ ಮಲ್ಲಿಕಾರ್ಜುನ ಸಜ್ಜನ ಜನಪದ ಸಾಹಿತ್ಯ ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ವಿ.ಜಿ.ಗೋವಿಂದರಪ್ಪನವರ, ಸಿ.ಎನ್. ಬಾಳಕ್ಕನವರ, ಅರ್ಜುನರಡ್ಡಿ ಹಂಚಿನಾಳ ವೇದಿಕೆಯಲ್ಲಿದ್ದರು.

ಡಾ.ಚಂದ್ರಶೇಖರ ಕಾಳನ್ನವರ ನಿರೂಪಿಸಿದರು.

ಯೋಗೇಶ ಲಮಾಣಿ ಸ್ವಾಗತಿಸಿದರು.

ಎ.ಎಂ.ಮೋಮಿನ ವಂದಿಸಿದರು.

# ಸಾರ್ವಜನಿಕರ ಕುಂದು, ಕೊರತೆಗಳಿಗೆ ಸ್ಪಂದಿಸುವಂತೆ ಶಾಸಕ ಜೆ.ಟಿ. ಪಾಟೀಲ ಅಧಿಕಾರಿಗಳಿಗೆ ಸೂಚನೆ




**ಬೀಳಗಿ :** ಸಾರ್ವಜನಿಕರಿಂದ ಬಂದ ಅಹವಾಲು, ತುರ್ತು ವಿಲೇವರಿಗೆ ಕ್ರಮ ಕೈಗೊಳ್ಳುವಂತೆ ಬೀಳಗಿ ಶಾಸಕಜೆ.ಟಿ.ಪಾಟೀಲ್ ಅಧಿಕಾರಿಗಳಿಗೆ ಸೂಚಿಸಿದರು.
ಬೀಳಗಿ ಮಿನಿ ವಿಧಾನಸೌಧದಲ್ಲಿ ತಸಿಲ್ದಾರ ಕೊಠಡಿಯಲ್ಲಿ ಸಭೆಯನ್ನು ಹಮ್ಮಿಕೊಂಡಿದ್ದು ಜನಸ್ಪಂದನಾ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸವಾಲುಗಳನ್ನು ಸ್ವೀಕರಿಸಿ ಮಾತನಾಡಿದ ಅವರು ಸಾರ್ವಜನಿಕರಿಗೆ ಹೊತ್ತು ತಂದ ಕುಂದು-ಕೊರತೆ ಹಾಗೂಅಹವಾಲುಗಳಿಗೆಸ್ಪಂದಿಸುವಕೆಲಸವಾಗಬೇಕು ಸಾಧ್ಯವಾದಷ್ಟು ಬೇಗ ಇತ್ಯರ್ಥಗೊಳಿಸಲು ಅಧಿಕಾರಿ ಹಾಗೂ ಇಲಾಖೆ ಮೇಲೆ ವಿಶ್ವಾಸ ಮೂಡಿಸುವ ಕಾರ್ಯಕ್ರಮವಾಗ ಬೇಕೆಂದು ಮಾತನಾಡಿದರು.
ರೈತರು ಕೇಳಿದ ಒಂದು ಪ್ರಶ್ನೆ ಬಿಳಗಿ ತಾಲೂಕಿನಲ್ಲಿರುವ ಕೆಲವು ಜಮೀನುಗಳಲ್ಲಿ ಕೆನಾಲನ್ನು ಸರ್ಕಾರದವರು ಹರಿಸಿದ್ದು ಸದರಿಕೆ ಜಮೀನುಗಳ ಉತಾರಗಳಲ್ಲಿ ಕರ್ನಾಟಕ ಸರ್ಕಾರ ಅಐಂತಾ ದಾಖಲೆ ಮಾಡಿದ್ದು ಕರ್ನಾಟಕ ಸರ್ಕಾರ ಅನ್ನುವುದನ್ನು ಕಡಿಮೆ ಮಾಡುವದರ ಬಗ್ಗೆ ಶಾಸಕರ ಮುಂದೆ ಪ್ರಶ್ನೆ ಇಟ್ಟಾಗ ಶಾಸಕರು ಸ್ಥಳದಲ್ಲಿ ಇದರ ಬಗ್ಗೆ ಒಂದು ನಿರ್ಧಾರವನ್ನು ತೆಗೆದುಕೊಂಡು ಒಬ್ಬರಂತೆ ಮಾಡದೆ ಎಲ್ಲರಿಗೂ ಒಂದು ಆದೇಶವನ್ನು ಹೊರಡಿಸಿ ಕರ್ನಾಟಕ ಸರ್ಕಾರ ಎಂಬುದನ್ನು ಕಡಿಮೆ ಮಾಡಬೇಕೆಂದು ಆದೇಶ ಮಾಡಿದರು
ಶಾಸಕರು ಬೀಳಗಿ ಠಾಣೆಯ ಸಿ ಪಿ ಐ ಅವರಿಗೆ ಶಿಸ್ತಿನ ಪಾಠ ಮಾಡಿದರು ಉದಾಹರಣೆಗೆ ರವಿಚಂದ್ರನ್ ಸರ್ ಹಾಗೂ ಶಿರೋಳ ಸರ್ ಬಗ್ಗೆ ಉದಾಹರಣೆ ನೀಡಿ ಅವರಿಗೆ ಟ್ರಾಫಿಕ್ ತೊಂದರೆಗಳ ಬಗ್ಗೆ ತಿಳಿ ಹೇಳಿದರು ಬೀಳಿಗಿಯ ಕೆಎಸ್ಆರ್ಟಿಸಿ ಡಿಪೋ ಮ್ಯಾನೇಜರ್ ಗೆ ರಾತ್ರಿ 8:30 ಇಂದ ಬಾಗಲಕೋಟೆಯಿಂದ ಗಲಗಲಿಗೆ ಬೀಳಗಿ ವಾಯ ಮೂಲಕ ಗಲಗಲಿ ತಲುಪುವಂತೆ ಮಾಹಿತಿ ನೀಡಿದರು
ಮಾನ್ಯ ಜಿಲ್ಲಾಧಿಕಾರಿಗಳು ವಸತಿ ಶಾಲೆಗಳಿಗೆ ಯಾವುದೇ ವಸೂಲಿ ಇಲ್ಲ ಮೆರಿಟ್ ಪಡೆದ ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ ಎಂದು ತಿಳಿಸಿದರು ಅಬ್ಬುಸಮು ಖಾಜಿ ಈ ವಿಷಯದ ಬಗ್ಗೆ ಪ್ರಶ್ನೆ ಮಾಡಿದ್ದರು
ಬೀಳಗಿ ತಾಲೂಕ್ ಡೆವಲಪ್ಮೆಂಟ್ ಗೆ 50 ಬಜೆಟ್ಗಳ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿದರು
ನಿರಂತರ 15 ದಿನಗಳ ಕಾಲ ವಿದ್ಯುತ್ ಸರಬರಾಜು ಇಲ್ಲದಕ್ಕಾಗಿ ಕೆಇಬಿ ಹೆಸ್ಕಾಂ ಅಧಿಕಾರಿಗಳಿಗೆ ಶಾಸಕರು ಅವರನು ತರಾಟೆಗೆ ತೆಗೆದುಕೊಂಡರು
ವಿಧಾನ ಸಭಾ ಪರಿಷತ್ ಸದಸ್ಯ ಎಂಎಲ್ಸಿ ಹನುಮಂತ ಆರ್ ನಿರಾಣಿ ಅವರು ಹಾಗೂ ಜಮಖಂಡಿಯ ಅಸಿಸ್ಟೆಂಟ್ ಕಮಿಷನರ್ ಸಂತೋಷ್ ಕಾಂಗೋಡ್ ಬಾಗಲಕೋಟ್ ಸಿಇಓ ಶಶಿಧರ್ ಕೊರಿಯರ್ ಮತ್ತಿತರರು ಉಪಸ್ಥಿತರಿದ್ದರು.

# ಅಲ್ಪಾವಧಿಯಲ್ಲಿ ಲಾಭ ತಂದ ಕೊತಂಬರಿ ಸೊಪ್ಪು

## 25 ಗುಂಟೆ, 35 ದಿನಗಳಲ್ಲಿ 56 ಸಾವಿರ ಲಾಭ ಕಂಡ ಯುವ ರೈತ

● ಚಂದ್ರಶೇಖರ ಮೋರೆ

**ಮಹಾಲಿಂಗಪುರ :** ರೈತ ಸಮುದಾಯವು ಜಾಣತಣದಿಂದ ಒಕ್ಕಲುತನ ಮಾಡಿದರೆ ಕಡಿಮೆ ಜಮೀನು, ಅಲ್ಪಾವಧಿಯಲ್ಲಿಯೇ ಲಾಭವನ್ನು ಮಾಡಿಕೊಳ್ಳಬಹುದು ಎಂಬುದನ್ನು ಸಮೀಪದ ಕೆಸರಗೊಪ್ಪ ಗ್ರಾಮದ ಯುವ ರೈತ ಬಸವರಾಜ ಶ್ರೀಶೈಲ ಸತ್ತಿಗೇರಿ ಸಾಧಿಸಿ ತೋರಿಸಿದ್ದಾರೆ.

**ಅಂತರ ಬೆಳೆಯಾಗಿ ಕೊತಂಬರಿ ಸೊಪ್ಪು:**
ಒಟ್ಟು 3.18 ಎಕರೆ ಜಮೀನು ಹೊಂದಿರುವ ಸಣ್ಣ ರೈತರಾದ ಬಸವರಾಜ ಸತ್ತಿಗೇರಿ ಅವರು ಪ್ರಸಕ್ತ ವರ್ಷದ ಮುಂಗಾರು ಹಂಗಾಮಿನಲ್ಲಿ 25 ಗುಂಟೆ ಜಮೀನಿನಲ್ಲಿ ಕಳೆದ ಮೇ.18ರಂದು ಅರಿಷಿನ ನಾಟಿ ಮಾಡಿದ್ದಾರೆ. ನಂತರ ಐದು ದಿನ ಬಿಟ್ಟು ಮೇ.22ರಂದು ಅಂತರ ಬೆಳೆಯಾಗಿ 35 ಕೆಜಿ ಕೊತಂಬರಿ ಬೀಜವನ್ನು ಹಾಕಿದ್ದರು. ಕೇವಲ 35 ದಿನಗಳಲ್ಲಿ ಕೊತಂಬರಿ ಸೊಪ್ಪು ಹುಲಸಾಗಿ ಬೆಳೆದಿದೆ. ಬಸವರಾಜ ಅವರು ಇನ್ನುಳಿದ ಜಮೀನಿನಲ್ಲಿ ಕಬ್ಬನ್ನು ಬೆಳೆಯುತ್ತಿದ್ದಾರೆ.

**ಗುತ್ತಿಗೆ ವ್ಯಾಪಾರ :**
ಕೇವಲ ಒಂದು ತಿಂಗಳ ಐದು ದಿನಗಳಲ್ಲಿ ಬೆಳೆದ ಕೊತಂಬರಿ ಸೊಪ್ಪನ್ನು ತರಕಾರಿ ವ್ಯಾಪಾರಸ್ಥರಿಗೆ ಬರೊಬ್ಬರಿ 60 ಸಾವಿರಕ್ಕೆ ಗುತ್ತಿಗೆ ಮಾರಾಟ ಮಾಡಿದ್ದಾರೆ. ಗುತ್ತಿಗೆ



ಪಡೆದ ವ್ಯಾಪಾರಿಯು ಕೂಲಿಕಾಳುಗಳ ಮೂಲಕ ಸೊಪ್ಪನ್ನು ಕಿತ್ತುಕೊಂಡು ಹೋಗಿದ್ದಾರೆ. ಇದರಿಂದ ರೈತನಿಗೆ ಕೂಲಿಆಳಿನ ಖರ್ಚು, ಸಾಗಾಣಿಕೆ ವೆಚ್ಚ ಮತ್ತು ವ್ಯಾಪಾರ ಮಾಡುವ ಸಮಸ್ಯೆಯಿಲ್ಲದೆ ನೇರವಾಗಿ ಲಾಭವನ್ನು ಕಂಡಿದ್ದಾರೆ. ಅರಿಷಿನ ಬೆಳೆಯ ಎಲೆಗಳು ದೊಡ್ಡದಾಗಿ ಅಗತಿ ಮಾಡುವದರೊಳಗೆ ಇನ್ನೊಮ್ಮೆ ಕೊತಂಬರಿ ಸೊಪ್ಪನ್ನು ಬೆಳೆಯಬಹುದಾಗಿದೆ ಎನ್ನುತ್ತಾರೆ ಬಸವರಾಜ.

**ಅಲ್ಪಾವಧಿಯಲ್ಲಿ ಅಧಿಕ ಲಾಭ :**
ಅರಿಷಿನ ಬೆಳೆಯಲ್ಲಿ ಅಂತರ ಬೆಳೆಯಾಗಿ ಕೇವಲ 25 ಗುಂಟೆ ಜಾಗೆಯಲ್ಲಿ 35 ಕೆಜಿ ಕೊತಂಬರಿ ಬೀಜವನ್ನು ಹಾಕಿದ್ದಾರೆ. ಅರಿಷಿನದ ಜೊತೆಗೆ ಹನಿನೀರಾವರಿ ಮೂಲಕ ನೀರು ಹಾಯಿಸಿದ್ದರಿಂದ ಪ್ರತ್ಯೇಕ ಕೆಲಸದ ಅಗತ್ಯವಿಲ್ಲ. 3500ರೂ ಕೊತಂಬರಿ ಬೀಜ, 500ರೂ ಕೀಟನಾಶಕ ಸಿಂಪರಣೆ ಸೇರಿ ಒಟ್ಟು 4 ಸಾವಿರ ಖರ್ಚು ಮಾಡಿದ್ದಾರೆ. ಕೇವಲ 35 ದಿನಗಳಲ್ಲಿ 4 ಸಾವಿರ ಖರ್ಚುಮಾಡಿ 56 ಸಾವಿರ ನಿವ್ವಳ ಲಾಭವನ್ನು ಕಂಡಿದ್ದಾರೆ.

**ಜಾಣತನದ ಒಕ್ಕಲುತನ ಅಗತ್ಯ**
ರೈತರು ತಮಗಿರುವ ಜಮೀನಿನಲ್ಲಿ ಹವಾಮಾನ, ಕಾಲಮಿತಿ, ಮಣ್ಣಿನ ಗುಣಧರ್ಮ ಆಧರಿಸಿ ಜಾಣತನದಿಂದ ಒಕ್ಕಲುತನ ಮಾಡಿದರೆ ಕೃಷಿಯಲ್ಲಿ ಲಾಭವನ್ನು ಕಾಣಬಹುದಾಗಿದೆ. ಕೇವಲ ದೀರ್ಘಾವಧಿ ಬೆಳೆಗಳನ್ನು ಅವಲಂಭಿಸುವದಕ್ಕಿಂತ ಅಂತರ ಬೆಳೆಯಾಗಿ ವಿವಿಧ ತರಕಾರಿ ಬೆಳೆಗಳನ್ನು ಮಾಡುವದರಿಂದ ಕಡಿಮೆ ಖರ್ಚು, ಅಲ್ಪಾವಧಿಯಲ್ಲಿ ಅಧಿಕ ಲಾಭವನ್ನು ಕಾಣಲು ಸಾಧ್ಯವಾಗುತ್ತದೆ.
। ಬಸವರಾಜ ಶ್ರೀಶೈಲ ಸತ್ತಿಗೇರಿ **ಕೆಸರಗೊಪ್ಪ.**

# ಶತಾಯುಷಿ ಪಂ.ವೈಶಂಪಾಯನಾಚಾರ್ಯ ನಾಗಸಂಪಿಗೆ ನಿಧನ

**ಬಾಗಲಕೋಟೆ :** ವಿಪ್ರ ಸಮಾಜದ ಹಿರಿಯರು, ಶತಾಯುಷಿ ಪಂ. ವೈಶಂಪಾಯನಾಚಾರ್ಯ ನಾಗಸಂಪಿಗೆ (100) ಅವರು ಶನಿವಾರ ನಸುಕಿನ ಜಾವ ನಿಧನ ಹೊಂದಿದರು.
ಮೃತರು ಪುತ್ರರಾದ ಪಂ. ಆನಂದತೀರ್ಥಾಚಾರ್ಯ, ಪಂ.ರಘೋತ್ತಮಾಚಾರ್ಯ, ಪಂ.ಬಿಂದುಮಾಧವಾಚಾರ್ಯ, ಪಂ.ವಿಜಯೇಂದ್ರಚಾರ್ಯ, ಪುತ್ರಿ ಪರಿಮಳಾ ಕಡಿವಾಲ ಸೇರಿ ಅಪಾರ ಬಂಧು



ಬಳಗವನ್ನು ಅಗಲಿದ್ದಾರೆ. ಪಂ. ವೈಶಂಪಾಯನಾಚಾರ್ಯರ ನಿಧನಕ್ಕೆ ಉತ್ತರಾದಿಮಠಾಧೀಶರಾದ ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು, ಉಡುಪಿ ಪೇಜಾವರ ಮಠದ ಶ್ರೀವಿಶ್ವಪ್ರಸನ್ನತೀರ್ಥ ಶ್ರೀಪಾದಂಗಳವರು, ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಮಠದ ಶ್ರೀಸುಬುಧೇಂದ್ರತೀರ್ಥ ಶ್ರೀಪಾದಂಗಳವರು, ಭಂಡಾರಕೇರಿಮಠದ ಶ್ರೀವಿದ್ಯೇಶತೀರ್ಥ ಶ್ರೀಪಾದಂಗಳವರು ಹಾಗೂ ಗಣ್ಯರು ಸಂತಾಪ ಸೂಚಿಸಿದ್ದಾರೆ.

# ಶ್ರೀಸಾರಿ ದುರ್ಗಾದೇವಿ ಮೂರ್ತಿಯ ಭವ್ಯ ಮೆರವಣಿಗೆ

**ಮಹಾಲಿಂಗಪುರ :** ಸ್ಥಳೀಯ ಕಲ್ಪಡ ಗಲ್ಲಿಯ ಬೈಲ ಪತ್ತಾರ ಸಮಾಜದಿಂದ ನಿರ್ಮಿಸಿದ ಶ್ರೀಸಾರಿ ದುರ್ಗಾದೇವಿ ಮೂರ್ತಿ ಪ್ರತಿಷ್ಠಾಪನೆ ಮತ್ತು ದೇವಸ್ಥಾನ ಉದ್ಘಾಟನೆ ಜೂ.30 ರ ಭಾನುವಾರ ಬೆಳಗ್ಗೆ 11ಕ್ಕೆ ನೆರವೇರಲಿದೆ.
ಅದರ ಪೂರ್ವಭಾವಿಯಾಗಿ ಶುಕ್ರವಾರ ಪಟ್ಟಣದ ರನ್ನಬೆಳಗಲಿ ರಸ್ತೆಯ ಮಹಾದ್ವಾರದಿಂದ ಬಸವವೃತ್ತ, ಡಬಲರಸ್ತೆ, ನಡಚೌಕಿ, ಮಹಾಲಿಂಗೇಶ್ವರ ದೇವಸ್ಥಾನ, ಬಸವಾನಂದ ಶಾಲೆಯ ಮಾರ್ಗವಾಗಿ ಕಲ್ಪಡನಲ್ಲಿನ ದೇವಸ್ಥಾನದವರೆಗೆ ತೆರೆದ ವಾಹನದಲ್ಲಿ ಶ್ರೀಸಾರಿ ದುರ್ಗಾದೇವಿ ಮೂರ್ತಿಯ ಭವ್ಯ ಮೆರವಣಿಗೆ ನಡೆಸಲಾಯಿತು.
ಮಹಿಳೆಯರ ಕುಂಭಮೇಳ, ಆರತಿ, ಕರಡಿ ಸೇರಿದಂತೆ ಮಂಗಳವಾದ್ಯಗಳೊಂದಿಗೆ ಬಂಡಾರದ ಓಕಳಿಯೊಂದಿಗೆ ದೇವಿಯ ಮೂರ್ತಿಯ ಮೆರವಣಿಗೆ ನಡೆಸಲಾಯಿತು.



ತೇರದಾಳ ಮತಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣುರ, ಜಿಪಂ ಮಾಜಿ ಸದಸ್ಯ ಮಹಾಂತೇಶ ಹಿಟ್ಟಿನಮಠ, ಪಿಕೆಪಿಎಸ್ ಅಧ್ಯಕ್ಷ ಬಸನಗೌಡ ಪಾಟೀಲ, ಪುರಸಭೆ ಸದಸ್ಯ ಬಸವರಾಜ ಚಮಕೇರಿ, ಮುಖಂಡರಾದ ವಿಜುಗೌಡ ಪಾಟೀಲ, ಸುನೀಲಗೌಡ ಪಾಟೀಲ, ಬೈಲ ಪತ್ತಾರ ಸಮಾಜದ ಹಿರಿಯರಾದ ಶಿವಾಜಿ ಅಣ್ಣಪ್ಪ ಅಂಕುಶಿ, ಭೀಮಪ್ಪ ರಾಜಪ್ಪ ಗರಡ, ಅಶೋಕ ನೀಲಕಂಟಪ್ಪ ಅಂಕುಶಿ, ಶಿವರಾಜ ಭೀಮಪ್ಪ ಪಂಚ್, ರಾಮಚಂದ್ರ ಈರಪ್ಪ ಪಂಚ, ಶಿವಾಜಿ ನೀಲಕಂಠಪ್ಪ ಅಂಕುಶಿ, ಆನಂದ ಅಂಕುಶಿ ಸೇರಿದಂತೆ ಹಲವರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.
**ಇಂದು ಮೂರ್ತಿ ಪ್ರತಿಷ್ಠಾಪನೆ :** ಜೂ.30ರ ಮುಂಜಾನೆ 11 ಕ್ಕೆ ದೇವಿಯ ಮೂರ್ತಿ ಪ್ರತಿಷ್ಠಾಪನೆ ಹಾಗೂ ದೇವಸ್ಥಾನದ ಉದ್ಘಾಟನೆ ನಡೆಯಲಿದೆ.ಮಹಾಲಿಂಗೇಶ್ವರ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಜಿ ದಿವ್ಯ ಸಾನಿಧ್ಯ ಹಾಗೂ ಸೈದಾಪುರದ ಶಾಂತ ದುರ್ಗಾದೇವಿ ಅರ್ಚಕರು ಸಾನಿಧ್ಯವಹಿಸಲಿದ್ದಾರೆ. ಶಾಸಕ ಸಿದ್ದು ಸವದಿ ಉದ್ಘಾಟಿಸುವರು, ವಿಪ ಸದಸ್ಯೆ ಉಮಾಶ್ರೀ, ರಾಜ್ಯ ಬೈಲ ಪತ್ತಾರ ಸಂಘದ ಉಪಾಧ್ಯಕ್ಷ ಶಿವಾಜಿ ಅಂಕುಶಿ, ಪಿಎಸೈ ಪ್ರವೀಣ ಬೀಳಗಿ, ಮುಖಂಡರಾದ ಬಸನಗೌಡ ಪಾಟೀಲ, ಸಿದ್ದುಕೊಣ್ಣೂರ,ಮಹಾಂತೇಶಹಿಟ್ಟಿನಮಠ, ಯಲ್ಲನಗೌಡ ಪಾಟೀಲ, ಸುನೀಲಗೌಡ ಪಾಟೀಲ, ಶೇಖರ ಅಂಗಡಿ, ಬಸವರಾಜ ಹಿಟ್ಟಿನಮಠ, ರವಿಗೌಡ ಪಾಟೀಲ, ಮಲ್ಲಪ್ಪ ಸಿಂಗಾಡಿ ಭಾಗವಹಿಸಲಿದ್ದಾರೆ ಎಂದು ಬೈಲ್ ಪತ್ತಾರ ಸಮಾಜದ ಹಿರಿಯರು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಜೀವನದಲ್ಲಿ ಶಿಸ್ತು ಸಂಯಮ ಅಳವಡಿಸಿಕೊಳ್ಳಿ: ಹುದ್ದಾರ

## ಶಾಲಾ ಸಚಿವ ಸಂಪುಟದ ಪ್ರಮಾಣವಚನ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭ

**ರಬಕವಿ :** ಜೀವನದಲ್ಲಿ ಶಿಸ್ತು ಸಂಯಮ ಅಳವಡಿಸಿಕೊಳ್ಳಿ. ಅದು ನಿಮ್ಮ ಭವಿಷ್ಯಕ್ಕೆ ಸಹಕಾರಿಯಾಗುತ್ತದೆ ಎಂದು ಬನಹಟ್ಟಿ ಪೊಲೀಸ್ ಠಾಣೆಯ ಎ.ಎಸ್.ಐ. ಶಿವಪ್ಪ ಹುದ್ದಾರ ಹೇಳಿದರು.
ಅವರು ಸಮೀಪದ ಹೊಸೂರಿನ ಪದ್ಮಾವತಿ ಇಂಟರ ನ್ಯಾಷನಲ್ ಶಾಲೆಯಲ್ಲಿ ಶಾಲಾ ಸಚಿವ ಸಂಪುಟದ ಪ್ರಮಾಣವಚನ ಹಾಗೂ ಶಾಲಾ ಸಾಂಸ್ಕೃತಿಕ ಚಟುವಟಿಕೆಗಳ ಉದ್ಘಾಟನಾ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದರು. ಮಕ್ಕಳ ಪ್ರತಿಭೆಯನ್ನು ಗುರುತಿಸಿ ಅವರಿಗೆ ಪ್ರೋತ್ಸಾಹಿಸುವುದು ಮುಖ್ಯ. ಬಾಲ್ಯದಲ್ಲಿಯೇ ಅವರ ಪ್ರತಿಭೆ ಬೆಳಕಿಗೆ ಬರುತ್ತದೆ ಎಂದರು.



ಕಾರ್ಯಕ್ರಮದಲ್ಲಿ ಸಂಸ್ಥೆಯ ಆಡಳಿತಾಧಿಕಾರಿಣಿ ಶ್ರೀಮತಿ ಭಾರತಿ ತಾಳಿಕೋಟಿ ಹಾಗೂ ಪ್ರಾಚಾರ್ಯರಾದ ಬಸವರಾಜ ಕಲಾದಗಿ ಉಪಸ್ಥಿತರಿದ್ದರು.
ಪ್ರಾರ್ಥನಾ ಗೀತೆಯೊಂದಿಗೆ ಪ್ರಾರಂಭವಾದ ಕಾರ್ಯಕ್ರಮವು ಹಲವಾರು ಚಟುವಟಿಕೆಗಳ ಮೂಲಕ ಎಲ್ಲರ ಗಮನ ಸೆಳೆಯಿತು.
ಶಾಲೆಯ ನಿಯಮಗಳ ಅನುಸಾರ ವಿದ್ಯಾರ್ಥಿಗಳ ನಾಲ್ಕು ವಿಭಿನ್ನ ಗುಂಪುಗಳು ಬೇರೆ-ಬೇರೆ ಸಮವಸ್ತ್ರಗಳನ್ನು ಧರಿಸಿಕೊಂಡು ನಡೆಸಿದ ಪಥಸಂಚಲನ ಎಲ್ಲರನ್ನೂ ಆಕರ್ಷಿಸಿತು. ನಂತರ ಬಂದ ಅತಿಥಿಗಳಿಂದ ಹಾಗೂ ಪ್ರಾಚಾರ್ಯರಿಂದ ಪ್ರತಿಜ್ಞೆ ಸ್ವೀಕರಿಸಿದರು.
ಸಂಭ್ರಮ ಯರಗಾಣಿ ಮತ್ತು ಸಮೃದ್ಧಿ ಸವದಿ ಸೊಗಸಾಗಿ ನಿರೂಪಿಸಿದರು. ಸಿಂಚನಾ ಸತಾನಿ ಹಾಗೂ ಧೀರಜ ಕುದುರಿಮನಿ ಸ್ವಾಗತಿಸಿದರು. ಸಂಜನಾ ಕೊನೆಗೆ ವಂದಿಸಿದರು.

# ವಾರ್ತಾಧಿಕಾರಿ ಸುರೇಶಗೆ ಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘ ಸನ್ಮಾನ



**ಬೀದರ :** ಇತ್ತಿಚೆಗೆ ಕಲಬುರಗಿ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪಡೆದ ನಿಮಿತ್ಯವಾಗಿ ಬೀದರ ಜಿಲ್ಲೆಯ ಸಹಾಯಕ ನಿರ್ದೇಶಕರಾದ ಜಿ. ಸುರೇಶ. ಅವರಿಗೆ ಹೈದರಾಬಾದ್ ಕನ್ನಡಿಗರ ಕಲ್ಯಾಣ ಅಭಿವೃದ್ಧಿ ಸಂಘದ ಅಧ್ಯಕ್ಷ ಹಾಗೂ ಪತ್ರಕರ್ತರ ಧರ್ಮೇಂದ್ರ ಪೂಜಾರಿ ಬಗ್ದೂರಿಯವರು ಸನ್ಮಾನ ಮಾಡಿ ಗೌರವಿಸಿದರು.
ಇಂದು ವಾರ್ತಾ ಇಲಾಖೆಯ ಕಛೇರಿ ಯಲ್ಲಿ. ಭೇಟಿಯಾಗಿ ಮಾತುಕತೆ ನಡೆಸಿದರು. ಸ್ಥಳೀಯ ಪತ್ರಿಕೆ ಬಗ್ಗೆ ಹೆಮ್ಮೆ ಕೆಲಸ ಮಾಡಿರುವುದನ್ನು ಗುರುತಿಸಿದರು. ತಮ್ಮ ಪ್ರಬಂಧ ಮಂಡಿಸಿ ಹೆಮ್ಮೆಯ ಕೆಲಸ ಮಾಡಿದಿರಿ. ಹೀಗೆ ನಿಮ್ಮ ಸೇವೆ ನಿರಂತರವಾಗಿ ಸಾಗಲಿ ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಶ್ರೀನಿವಾಸ ತೇಲಂಗ. ಭೀಮರಾವ ಬೀದರಕರ. ಹಾಗೂ ಬಿರಾದಾರ ಉಪಸ್ಥಿತರಿದ್ದರು.

# ದೇಶದ ಅಭಿವೃದ್ಧಿಯಲ್ಲಿ ಪತ್ರಿಕಾರಂಗದ ಪಾತ್ರ ಮುಖ್ಯ: ಮನ್ನಯ್ಯನವರಮಠ

**ಮಹಾಲಿಂಗಪುರ :** ಸಂವಿಧಾನದ ನಾಲ್ಕನೇ ಅಂಗವೆನಿಸಿರುವ ಪತ್ರಿಕಾರಂಗವು ದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತಿದೆ ಎಂದು ಮಹಾಲಿಂಗಪುರ ಕಾನಿಪ ಸಂಘದ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ ಹೇಳಿದರು.
ಸಮೀಪದ ರನ್ನಬೆಳಗಲಿಯ ಢಪಳಾಪುರ ವಿದ್ಯಾವಿಹಾರ ಸಿಬಿಎಸ್ಇ ಶಾಲೆಯಲ್ಲಿ ಶನಿವಾರ ಹಮ್ಮಿಕೊಂಡ ಪತ್ರಿಕಾ ದಿನಾಚರಣೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದರು. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಕ್ರೀಡಾತ್ಮಕ, ಕಲೆ, ಸಾಹಿತ್ಯ ಹೀಗೆ ಹತ್ತಾರು ಮುಖಗಳಲ್ಲಿ ಜ್ಞಾನ ಒದಗಿಸುತ್ತ ಸಾಮಾಜಿಕ ಮತ್ತು ರಾಷ್ಟ್ರದ ಸ್ವಾಸ್ಥ್ಯಕಾಪಾಡುತ್ತ ಸದೃಢ ರಾಷ್ಟ್ರ ನಿರ್ಮಾಣದಲ್ಲಿ ಪತ್ರಿಕಾರಂಗದ ಪಾತ್ರ ಅಗ್ರಗಣ್ಯವಾಗಿದೆ ಎಂದರು.




ಪತ್ರಕರ್ತ ನಾರನಗೌಡ ಉತ್ತಂಗಿ ಮಾತನಾಡಿ ಶಾಸಕಾಂಗ, ನ್ಯಾಯಾಂಗ, ಕಾರ್ಯಾಂಗಗಳನ್ನು ಸದಾ ಸರಿದಾರಿಯಲ್ಲಿ ನಡೆಸುವ ಮಾಧ್ಯಮಗಳು ಸಂವಿಧಾನದ ಸಾರಥಿ ಇದ್ದಂತೆ. ಮಾಧ್ಯಮಗಳು ಸಂವಿಧಾನದ ಆಧಾರ ಸ್ಥಂಭ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಮಕ್ಕಳು ದಿನ ಪತ್ರಿಕೆಗಳನ್ನು ಓದಿ ಸಮೃದ್ಧರಾಷ್ಟ್ರ ನಿರ್ಮಾಣದಲ್ಲಿ ಭಾಗಿಯಾಗಬೇಕು ಎಂದರು.
ಪತ್ರಕರ್ತ ಚಂದ್ರಶೇಖರ ಮೋರೆ ಮಾತನಾಡಿ, ಪತ್ರಿಕೆಗಳು ಸಮಗ್ರ ಜ್ಞಾನ ನೀಡುತ್ತವೆ. ಅದಕ್ಕಾಗಿ ವಿದ್ಯಾರ್ಥಿಗಳು ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪತ್ರಕರ್ತರು ಸಮಾಜದ ಅಂಕುಡೊಂಕುಗಳನ್ನು ತಿದ್ದುವ ಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದರು.
ಪತ್ರಕರ್ತಲಕ್ಷ್ಮಣಕಿಶೋರಮಾತನಾಡಿದರು. ಶಾಲೆಯ ಸಂಸ್ಥಾಪಕ ವಿವೇಕ ಢಪಳಾಪುರ ಅಧ್ಯಕ್ಷತೆ ವಹಿಸಿದ್ದರು.ರನ್ನಬೆಳಗಲಿಯ ಗಾಯಕವೆಂಕಪ್ಪಕೋನ್ಯಾಗೋಳಅವರನ್ನು ಸನ್ಮಾನಿಸಲಾಯಿತು.
ಪ್ರಾಚಾರ್ಯ ಲೂಯಿಸ್ ಬರೆಟ್ಟೋ, ಜಿಲ್ಲಾ ಕಾನಿಪ ಕಾರ್ಯಕಾರಣಿ ಸದಸ್ಯ ಎಸ್.ಎಸ್. ಈಶ್ವರಪ್ಪಗೋಳ, ಪತ್ರಕರ್ತರಾದ ಮೀರಾ ತಟಗಾರ, ಶಿವಲಿಂಗ ಸಿದ್ನಾಳ, ಇಲಾಹಿ ಜಮಖಂಡಿ ಇದ್ದರು. ಪತ್ರಿಕಾ ದಿನಾಚರಣೆ ನಂತರ ಶಾಲಾ ಮಕ್ಕಳನ್ನು ಮಹಾಲಿಂಗೇಶ್ವರ ಗೋಶಾಲೆಗೆ ಭೇಟಿ ನೀಡಿ, ಗೋಪೂಜೆ ಮಾಡಿ, ಮೇವು ತಿನ್ನಿಸಿ ವಿದ್ಯಾರ್ಥಿಗಳಿಗೆ ಗೋವಿನ ಮಹತ್ವ ತಿಳಿಸಲಾಯಿತು.



**ಹಳ್ಳೂರ :** ಗ್ರಾಮದಲ್ಲಿ ನೆಲೆಯಾಗಿ ನೆಲೆಸಿರುವ ಹಳ್ಳೂರ, ಕಪ್ಪಲಗುದ್ಧಿ, ಶಿವಾಪೂರ ಮೂರೂರು ಗ್ರಾಮದ ಆರಾಧ್ಯ ದೇವರಾದ ಶ್ರೀ ಮಹಾಲಕ್ಷ್ಮೀ ಹಾಗೂ ದ್ಯಾಮವ್ವ ದೇವಿ ವಾರ ಹಿಡಿಯುವ 2 ನೇ ವಾರದ ಕಾರ್ಯಕ್ರಮದ ನಿಮಿತ್ಯ ಶ್ರೀ ಮಹಾಲಕ್ಷ್ಮೀ ದೇವಸ್ಥಾನದಲ್ಲಿ ಡೊಳ್ಳಿನ ಪದಗಳು ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಮುರೂರು ಗ್ರಾಮಸ್ಥರು ಎಲ್ಲ ದೇವರಿಗೆ ಅನ್ನ ಅಂಬಲಿ ನೈವೇದ್ಯ ಅರ್ಪಿಸಿದರು.ಮುಂಜಾನೆ ಮುದ್ದು ಮಕ್ಕಳು ಎಲ್ಲ ದೇವರಿಗೆ ನೀರುಣಿಸಿದರು. ಮಾಲಿಕರು ಅಂಗಡಿಗಳನ್ನು ಸ್ವ ಇಚ್ಛೆಯಿಂದ ಬಂದ ಮಾಡಿದ್ದರು.

## ಹಿಂದೂ ಸಾಮ್ರಾಜ್ಯೋತ್ಸವ

# ಜೀಜಾಬಾಯಿ ತಾಯ್ತನ, ಶಿವಾಜಿ ದೇಶಪ್ರೇಮ ಅನುಕರಣನೀಯ: ಸಾಗರ ಭೋವಿ

**ಮಹಾಲಿಂಗಪುರ :** ಮೊಘಲರ ದಾಳಿಯಿಂದ ನಲುಗಿ ಹೋಗಿದ್ದ ಹಿಂದೂ ಧರ್ಮವನ್ನು ರಕ್ಷಿಸಲು ಹೋರಾಡಿದ ಶಿವಾಜಿ ಮಹಾರಾಜರ ಹೋರಾಟವನ್ನು ಪ್ರತಿಯೊಬ್ಬ ಹಿಂದೂ ನಿತ್ಯ ಸ್ಮರಿಸಬೇಕು ಎಂದು ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಹಾಲಿಂಗಪುರ ಹೊಬಳಿ ನಿರ್ವಾಹ ಸಾಗರ ಭೋವಿ ಹೇಳಿದರು.
ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಸ್ಥಳೀಯ ಚನ್ನಗಿರೇಶ್ವರ ಶಾಖೆ ವತಿಯಿಂದ ಹಮ್ಮಿಕೊಂಡಿದ್ದ ಹಿಂದೂ ಸಾಮ್ರಾಜ್ಯೋತ್ಸವದಲ್ಲಿ ಮಾತನಾಡಿದ ಅವರು, ಒಬ್ಬ ತಾಯಿ ಮಗುವನ್ನು ಹೇಗೆ ಬೆಳೆಸಬೇಕು ಎಂಬುದನ್ನು ಶಿವಾಜಿ ಮಹಾರಾಜರ ತಾಯಿ ಜೀಜಾಬಾಯಿಯವರನ್ನು ನೋಡಿ ಕಲಿಯಬೇಕು. ಸಂಘಟನಾ ಚತುರರಾದ ಶಿವಾಜಿ ತಮ್ಮ 19ನೇ ವಯಸ್ಸಿನಲ್ಲಿಯೇ ತೋರಣಗಡವನ್ನು ಗೆದ್ದು ನಂತರ 42 ಕೋಟೆಗಳನ್ನು ಗೆದ್ದರು. ಅಫ್ಜಲ್ ಖಾನ್ ಸಂಹಾರ ಮಾಡಿದ್ದು, ಔರಂಗಜೇಬನ ಸೆರೆಮನೆಯಿಂದ ಪಾರಾಗಿ ಬಂದ ಚಾಣಾಕ್ಷತೆ ಮತ್ತು ಅಪ್ರತಿಮ ದೇಶಪ್ರೇಮ ಅನುಕರಣನೀಯ, ಪ್ರಸ್ತುತ ಸನ್ನಿವೇಶದಲ್ಲಿ ಸಂಘದ ಕಾರ್ಯದಲ್ಲಿ ಪ್ರತಿ ಭಾರತೀಯನೂ ಭಾಗಿಯಾಗಿ ದೇಶಸೇವೆ ಮಾಡಬೇಕಾಗಿದೆ ಎಂದರು.
ಮುಖ್ಯಶಿಕ್ಷಕ ದಾನೇಶ ಸಗರಿ, ಗಣಶಿಕ್ಷಕ ಸಚಿನ್ ಸಗರಿ, ಸಹಗಣಶಿಕ್ಷಕ ಸಮರ್ಥ ಇಂಗಳಗಿ, ಮಲ್ಲಿಕಾರ್ಜುನ ಇಂಗಳಗಿ, ವಿನಾಯಕ ತಿಮ್ಮಾಪುರ, ಸಂಪತ್ ಇಂಗಳಗಿ ಸೇರಿದಂತೆ ಹಲವರು ಇದ್ದರು.

# ಮೃತ ವ್ಯಕ್ತಿಯ ವಾರಸುದಾರರ ಪತ್ತೆಗೆ ನೆರವು

**ಬಾಗಲಕೋಟೆ :** ಅಂದಾಜು 35 ರಿಂದ 40 ವರ್ಷದ ಅನಾಮಧೇಯ ವ್ಯಕ್ತಿ ಅಮೀನಗಡ ಪಟ್ಟಣದ ಆಂಗ್ಲ ಮಾಧ್ಯಮ ಶಾಲೆಯ ಹತ್ತಿರ ಇರುವ ಕೆರೆಯ ನೀರಿನಲ್ಲಿ ಮುಳಗಿ ಮರಣ ಹೊಂದಿರುತ್ತಾರೆ.ಸದರಿವ್ಯಕ್ತಿಯಹೆಸರುಮತ್ತು ವಿಳಾಸ ಪತ್ತೆಯಾಗಿರುವದಿಲ್ಲ. ಈ ಬಗ್ಗೆ ಅಮೀನಗಡ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ವ್ಯಕ್ತಿ 4.5 ಇಂಚ್ ಎತ್ತರವಿದ್ದು, ಕಪ್ಪು ಮೈ ಬಣ್ಣ, ಎಡಗಾಲಿನಲ್ಲಿ ಕರಿದಾರ ಕಟ್ಟಿರುತ್ತಾನೆ. ಸದರಿ



ವ್ಯಕ್ತಿಯಬಗ್ಗೆಮಾಹಿತಿದೊರೆತಲ್ಲಿಅಮೀನಗಡ ಪೊಲೀಸ್ ಠಾಣೆ ದೂಸಂ.08351-280133, 9480803953,ಹುನಗುಂದವೃತ್ತದಪೊಲೀಸ್ ಸರ್ಕಲ್ ಇನ್ಸಪೆಕ್ಟರ ಮೊನಂ.9480803933, ಪೊಲೀಸ್ ಉಪವಿಭಾಗಾಧಿಕಾರಿ ದೂಸಂ.08351-200104, ಕಂಟ್ರೋಲ್ ರೂಮ್ ನಂ.08354-235079ಗೆ ಸಂಪರ್ಕಿಸಿ ಮಾಹಿತಿ ನೀಡುವಂತೆ ಅಮೀನಗಡ ಠಾಣೆಯ ಪಿ.ಎಸ್.ಐ ಶಿವಾನಂದ ಸಿಂಗನ್ನವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜನರ ಮನಸ್ಥಿತಿ ಬದಲಾಗಬೇಕು: ರಾಜಕುಮಾರ ಸಿ.



**ಧಾರವಾಡ** : ದೇಶದಲ್ಲಿ ಕಠಿಣ ಕಾನೂನುಗಳು ಜಾರಿಯಲ್ಲಿದ್ದರೂ ಜನ ಮಕ್ಕಳು, ಮಹಿಳೆ ವಿಷಯದಲ್ಲಿ ತಮ್ಮ ಮನೋಸ್ಥಿತಿ ಬದಲಾಯಿಸಿ ಕೊಳ್ಳುತ್ತಿಲ್ಲ. ಎಲ್ಲೆಡೆ ಮಕ್ಕಳು, ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ದೈಹಿಕ ಹಲ್ಲೆ, ಮಾನಸಿಕ ಕಿರುಕುಳ ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಅವರ ಮೇಲಿನ ಶೋಷಣೆ ತಪ್ಪುತ್ತಿಲ್ಲ. ಇದಕ್ಕೆ ಪರಿಹಾರವೆಂದರೆ ಜನರ ಮನಸ್ಥಿತಿ ಬದಲಾಗಬೇಕು. ಪರಸ್ಪರ ಪ್ರೀತಿ, ವಿಶ್ವಾಸ, ಗೌರವ ಹೆಚ್ಚಿಸುವ ಕಾರ್ಯಚಟುವಟಿಕೆಗಳು ಎಲ್ಲೆಡೆ ಮೂಡಿ ಬರಬೇಕು ಎಂದು ಪ್ರಭಾರ, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ರಾಜಕುಮಾರ ಸಿ. ಅವರು ಹೇಳಿದರು.

ಅವರು ಇಂದು ಬೆಳಿಗ್ಗೆ ಧಾರವಾಡ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಪೊಲೀಸ್ ಇಲಾಖೆ ಹಾಗೂ ಇತರ ಇಲಾಖೆಗಳ ಸಹಯೋಗದಲ್ಲಿ ಪೋಕ್ಸೊ ಕಾಯ್ದೆ- 2012, ಬಾಲ್ಯ ವಿವಾಹ ನಿಷೇಧ ಕಾಯ್ದೆ-2006 ಹಾಗೂ ಕರ್ನಾಟಕ ರಾಜ್ಯ ತಿದ್ದುಪಡಿ ಕಾಯ್ದೆ-2019, ಮಹಿಳೆಯರ ಮತ್ತು ಮಕ್ಕಳ ಅನೈತಿಕ ಸಾಗಾಣಿಕೆ ತಡೆ ಕುರಿತು ಅನು?ಾ?ಠನಾಧಿಕಾರಿಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರ ಉದ್ಘಾಟಿಸಿ, ಮಾತನಾಡಿದರು.

ಪೋಕ್ಸೊ ವಿಶೇಷ ನ್ಯಾಯಾಲಯದಲ್ಲಿನ ಪ್ರಕರಣಗಳನ್ನು ನೋಡಿದಾಗ, ಈ ಅಮಾನವೀಯ ಘಟನೆಗಳು ಜರುಗಲು ಅವರಲ್ಲಿ ಕಾನೂನು ಅರಿವಿನ ಕೊರತೆ ಸಹ ಕಾಣುತ್ತದೆ. ಮಕ್ಕಳಲ್ಲಿ ಪೋಕ್ಸೊ ಮತ್ತು ಬಾಲ್ಯ ವಿವಾಹ ನಿಷೇಧ ಕಾನೂನುಗಳ ಬಗ್ಗೆ ತಿಳುವಳಿಕೆ ಮೂಡಿಸಬೇಕು. ಅಸಹನೀಯ ಘಟನೆಗಳು ನಡೆದಾಗ ಯಾರನ್ನು, ಹೇಗೆ, ಎಲ್ಲಿ ಸಂಪರ್ಕಿಸಬೇಕು ಎಂಬ ತಿಳುವಳಿಕೆ ಮಕ್ಕಳಿಗೆ ಇರಬೇಕು.

ಈನಿಟ್ಟಿನಲ್ಲಿಎಲ್ಲಇಲಾಖೆಗಳುಕಾರ್ಯಕ್ರಮ ರೂಪಿಸಿ, ಜಾರಿಗೊಳಿಸಬೇಕೆಂದು ಅವರು ಹೇಳಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವು ಕಾನುನೂಗಳ ಉಚಿತ ನೆರವು ಮತ್ತು ಅರಿವು ಕಾರ್ಯಕ್ರಮಗಳನ್ನು ನಿರಂತರವಾಗಿ ಸಂಘಟಿಸುತ್ತಿದೆ. ಆದರೂ ಸಹ ವಿಶೇಷವಾಗಿ ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳು ಕಡಿಮೆ ಆಗುತ್ತಿಲ್ಲ. ಸಮುದಾಯದ ಸಹಕಾರದಿಂದ ಇಂತಹ ಅನಿಷ್ಟಗಳನ್ನು ತಡೆಗಟ್ಟಬಹುದು. ಸರಕಾರಿ ಇಲಾಖೆಗಳು ಹಾಗೂ ಸಮುದಾಯ ಸಂಘಟನೆಗಳು ಕೈ ಜೋಡಿಸಬೇಕೆಂದು ನ್ಯಾಯಾಧೀಶ ರಾಜಕುಮಾರ ಸಿ., ಅವರು ತಿಳಿಸಿದರು.

ಹುಬ್ಬಳ್ಳಿ ಎಸಿಪಿ ಎಸ್.ಟಿ.ಒಡೆಯರ ಅವರು ಅಧ್ಯಕ್ಷತೆವಹಿಸಿ ಮಾತನಾಡಿ, ವಿವಿಧ ಕಾನೂನುಗಳ ಅರಿವು ಅನು?ಾ?ಠನ ಅಧಿಕಾರಿಗಳಿಗೆ ಅಗತ್ಯವಿದೆ. ಪೋ?ಕ್ಸೊ ಮತ್ತು ಬಾಲ್ಯ ವಿವಾಹ ತಡೆಗಟ್ಟುವಲ್ಲಿ ಎಲ್ಲ ಇಲಾಖೆಗಳ ಸಹಕಾರ ಅಗತ್ಯವಿದೆ. ಶಾಲಾ ಕಾಲೇಜುಗಳಲ್ಲಿ ಪೊಲೀಸ ಇಲಾಖೆಯಿಂದ ಕಾನೂನು ಜಾಗೃತಿ ಶಿಬಿರಗಳನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ವೇದಿಕೆಯಲ್ಲಿ ಸರ್ಕಾರಿ ಅಭಿಯೋಜಕಿ ಶೈಲಾ ಅಂಗಡಿ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಎಸ್.ಎಸ್.ಕೆಳದಿಮಠ, ಎಸ್.ಎಂ.ಹುಡೆದಮನಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಕೆ.ಪಿ.ಸುರೇಶ ಇದ್ದರು.

# ನಾಡಪ್ರಭು ಶ್ರೀ ಕೆಂಪೇಗೌಡರ ಜಯಂತ್ಯೋತ್ಸವ




**ಧಾರವಾಡ :** ಬೆಂಗಳೂರು ನಗರವನ್ನು ವ್ಯವಸ್ಥಿತವಾಗಿ ನಿರ್ಮಿಸುವಲ್ಲಿ ಕೆಂಪೇಗೌಡರು ಪ್ರಮುಖ ಪಾತ್ರ ವಹಿಸಿದ್ದರು. ಅಂದು ಅವರು ನಿರ್ಮಿಸಿದ ಬೆಂಗಳೂರು ನಗರ ಇಂದು ವಿಸ್ತಾರವಾಗಿ ಬೆಳೆದು ವಿಶ್ವ ಭೂಪಟದಲ್ಲಿಗುರುತಿಸಿಕೊಂಡಿದೆ ಎಂದು ಹೇಳಿದರು.

ಬೆಂಗಳೂರು ನಗರ ನಿರ್ಮಿಸಿದ ಕೆಂಪೇಗೌಡರ ಹೆಸರನ್ನು ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇಡಲಾಗಿದ್ದು, ಕೆಂಪೇಗೌಡರ 108 ಅಡಿ ಪ್ರತಿಮೆಯ ಸ್ಥಾಪನೆಗೆ ಸರ್ಕಾರ ಮುಂದಾಗಿರುವುದು ಸಂತೋಷದಾಯಕ ವಿಚಾರವಾಗಿದೆ ಎಂದು ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಅಧ್ಯಕ್ಷರಾದ ಸಂಗಮೇಶ. ಬಬಲೇಶ್ವರ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾಪಂಚಾಯತಹಾಗೂಕನ್ನಡಮತ್ತು ಸಂಸ್ಕೃತಿ ಇಲಾಖೆಯ ಸಂಯುಕ್ತ ಆಶ್ರಯದಲ್ಲಿ ನಗರದ ಆಲೂರು ವೆಂಕಟರಾವ್ ಸಾಂಸ್ಕೃತಿಕ ಸಭಾಭವನದಲ್ಲಿ ನಡೆದ ಜಯಂತ್ಯೋತ್ಸವದಲ್ಲಿ ನಾಡಪ್ರಭು ಶ್ರೀ ಕೆಂಪೇಗೌಡರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅಪರ ಜಿಲ್ಲಾಧಿಕಾರಿ ಗೀತಾ ಸಿ.ಡಿ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ, ನಾಡಪ್ರಭು ಕೆಂಪೇಗೌಡ ಅವರು ನಮ್ಮ ನಾಡಿಗೆ ನೀಡಿದಂತ ಕೊಡುಗೆ ಅಪಾರವಾಗಿದೆ, 64 ಪೇಟೆ (ಮಾರ್ಕೆಟ್)ಗಳು, 10 ಕೆರೆಗಳು, ದೇವಾಲಯಗಳು, ಅನ್ನಛತ್ರಗಳು, ಶಿಕ್ಷಣ ಸಂಸ್ಥೆಗಳು ಹೀಗೆ ಹತ್ತು ಹಲವಾರು ರೀತಿಯಲ್ಲಿ ಸಾಮಾಜಿಕ ಸೇವೆಗಳನ್ನು ಮಾಡಿದ್ದಾರೆ ಎಂದು ಹೇಳಿದರು. ಇದೇ ಸಂದರ್ಭದಲ್ಲಿ ಕೆಂಪೇಗೌಡ ಜಯಂತಿಯ ಪ್ರಯುಕ್ತ ನಡೆಸಿದ ಪ್ರಬಂಧ, ರಸಪ್ರಶ್ನೆ ಸ್ಪರ್ಧೆಗಳಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

ಕಲಘಟಗಿ ಗುಡ್ ನ್ಯೂಸ್ ಕಾಲೇಜಿನ ಪ್ರಾಚಾರ್ಯ ಡಾ. ಮಹೇಶ ಹೊರಕೇರಿ ಅವರು ಕೆಂಪೇಗೌಡರ ಜೀವನ, ಸಾಧನೆಗಳ ಕುರಿತು ಉಪನ್ಯಾಸ ನೀಡಿ-ದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಬೆಕ್ಕೇರಿ ಅವರು ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ ಡಾ. ಡಿ.ಹೆಚ್. ಹೂಗಾರ,ಸಮಾಜದಮುಖಂಡರಾದಕೃಷ್ಣೇಗೌಡರು, ಹಾಗೂ ಇತರರು, ವಿದ್ಯಾರ್ಥಿಗಳು, ಗಣ್ಯರು, ಹಿರಿಯ ನಾಗರಿಕರು, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ತಾಂತ್ರಿಕ ಜ್ಞಾನ ಬಳಸಿ ಕೃಷಿ ಕ್ಷೇತ್ರ ಅಭಿವೃದ್ಧಿಗೊಳಿಸಲು ಕರೆ




**ಧಾರವಾಡ** : ಕೃಷಿ ಪದವೀಧರರು ತಮ್ಮ ತಾಂತ್ರಿಕ ಜ್ಞಾನ ಬಳಸಿ ನಾಡಿನ ಸರ್ವತೋಮುಖ ಏಳಿಗೆಗೆ ಶ್ರಮಿಸಬೇಕು ಎಂದು ಕೃಷಿ ಸಚಿವರಾದ ಎನ್. ಚಲುವರಾಯಸ್ವಾಮಿ ಅವರು ಕರೆ ನೀಡಿ-ದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ 37 ನೇ ಘಟಿಕೋತ್ಸವದಲ್ಲಿ ಪಾಲ್ಗೊಂಡು ಮಾತನಾಡಿದ ಅವರು ಕೃಷಿ ಪದವೀಧರರು ಉದ್ಯೋಗ ಅರಸುವ ಬದಲು ಕೆಲಸ ನೀಡುವವರಾಗಿ ಬೆಳೆಯಬೇಕು ಎಂದರು. ಕೃಷಿ ಕ್ಷೇತ್ರದಲ್ಲಿ ಮೂಲ್ಯವರ್ಧನೆ ಹಾಗೂ ಅಭಿವೃದ್ಧಿಗೆ ವ್ಯಾಪಕ ಅವಕಾಶ ಇದೆ. ಕೃಷಿ ಪದವಿಧರರು ತಮ್ಮ ಕೌಶಲ್ಯವನ್ನು ಈ ಕ್ಷೇತ್ರದ ವಿಕಾಸಕ್ಕೆ ಬಳಸಬೇಕು ಎಂದು ಸಲಹೆ ನೀಡಿದರು.

ಧಾರವಾಡದ ಕೃಷಿ ವಿ.ವಿ ಯ 37ನೇ ಘಟಿಕೊತ್ಸವದಲ್ಲಿ 69 ಪಿ.ಹೆಚ್.ಡಿ, 237 ಸ್ನಾತಕೋತ್ತರ ಹಾಗೂ 627 ಸ್ನಾತಕ ಪದವಿ ಸೇರಿದಂತೆ 933 ಅಭ್ಯರ್ಥಿಗಳಿಗೆ ಪದವಿ ಪ್ರಧಾನ ಮಾಡಲಾಗಿದೆ. 57 ಚಿನ್ನದ ಪದಕ ಹಾಗೂ 99 ನಗದು ಬಹುಮಾನ ನೀಡಲಾಗಿದೆ. ಈ ಗೌರವಕ್ಕೆ ಪಾತ್ರವಾಗಿರುವ ಎಲ್ಲರಿಗೂ ಅಭಿನಂದನೆಗಳು, ಅಲ್ಲದೆ ಈ ವರ್ಷದ ಧಾರವಾಡ ಕೃಷಿ ವಿವಿ ವಿದ್ಯಾರ್ಥಿನಿ ಕುಮಾರಿ ಸೌಭಾಗ್ಯ ಬೀಳಗಿಮಠ ಯು.ಪಿ.ಎಸ್.ಸಿ ಪರೀಕ್ಷೆಯಲ್ಲಿ 101 ನೇ ರಾಂಕ್ ಗಳಿಸಿರುವುದು ರಾಜ್ಯಕ್ಕೆ ಹೆಮ್ಮೆ ತಂದಿದೆ ಎಂದು ಕೃಷಿ ಸಚಿವರು ಮೆಚ್ಚುಗೆ ವ್ಯಕ್ತಪಡಿಸಿದರು.

ಧಾರವಾಡ ಕೃಷಿ ವಿ.ವಿ ದೇಶದ ಶ್ರೇಷ್ಠ ವಿಶ್ವವಿದ್ಯಾಲಗಳಲ್ಲಿ ಒಂದಾಗಿದ್ದು, ಹೊಸ ಹೊಸ ಸಂಶೋಧನೆಗಳ ಮೂಲಕ ಕೃಷಿ ಕ್ಷೇತ್ರಕ್ಕೆ ದೊಡ್ಡ ಕೊಡುಗೆ ನೀಡಿರುವುದು ಪ್ರಶಂಸನೀಯಎಂದುಚಲುವರಾಯಸ್ವಾಮಿ ಹೇಳಿದರು.

ವಿಶ್ವವಿದ್ಯಾಲಯಗಳು ರೈತರಿಗೆ ಆತ್ಮವಿಶ್ವಾಸ ತುಂಬುವ ಜೊತೆಗೆ ವೈಜ್ಞಾನಿಕ, ತಾಂತ್ರಿಕ ನೆರವು ಒದಗಿಸಬೇಕು ಎಂದು ಅವರು ಸೂಚನೆ ನೀಡಿದರು.

ಮುಖ್ಯ ಅತಿಥಿಗಳಾಗಿ ಮಾತನಾಡಿದ ನವ ದೆಹಲಿಯ ಕೃಷಿ ವಿಜ್ಞಾನಿಗಳ ನೇಮಕಾತಿ ಮಂಡಳಿ ಅಧ್ಯಕ್ಷರಾದ ಡಾ. ಸಂಜಯ ಕುಮಾರ ಅವರು ಮಾತನಾಡಿ ಭಾರತ ದೇಶವು 2050ಕ್ಕೆ 1.7 ಬಿಲಿಯನ್ ಜನಸಂಖ್ಯೆ ಹೊಂದಲಿದ್ದು, ಸದ್ಯದ ಬೇಡಿಕೆಯ ಶೇ 70 ರಷ್ಟು ಕೃಷಿ ಉತ್ಪನ್ನಗಳ ಬೇಡಿಕೆ ಹೆಚ್ಚಲಿದ್ದು ಇದನ್ನು ಎದುರಿಸಲು ಕೃಷಿ ಕ್ಷೇತ್ರದಲ್ಲಿ ಹಲವಾರು ಬದಲಾವಣೆ ತರುವ ಅಗತ್ಯವಿದೆ ದೇಶದ ಖಾದ್ಯ ತೈಲ ಉತ್ಪಾದನೆಯು ಶೇ 40 ರಷ್ಟು ವಾರ್ಷಿಕ ಬೇಡಿಕೆ ಪೂರೈಸಲಿದ್ದು ಶೇ 60 ರಷ್ಟು ಆಮದು ಮಾಡಿಕೊಳ್ಳಲಾಗುತ್ತಿದೆ.

ಅಧ್ಯಕ್ಷತೆ ವಹಿಸಿದ್ದ ರಾಜ್ಯಪಾಲರಾದ ಥಾವರಚಂದ ಗೊಹ್ಲೊಟ್ ಮಾತನಾಡಿ ಕೃಷಿ ಕ್ಷೇತ್ರವನ್ನು ಶ್ರೀಮಂತಗೊಳಿಸಲು ಯಾವ ವಿಜ್ಞಾನಿಗಳು ಮುಂದಾಗಬೇಕಿದೆ. ಆಧುನಿಕ ಕಾಲದಲ್ಲಿ ವಿವಿಧ ಮಾಲಿನ್ಯದ ನಡುವೆ ನೈಸರ್ಗಿಕ ಹಾಗೂ ಸಾವಯವ ಕೃಷಿಗೆ ಹೆಚ್ಚು ಒತ್ತು ನೀಡಬೇಕಿದೆಯೆಂದು ಕರೆ ನೀಡಿದರು.

ಕೃಷಿ ಕ್ಷೇತ್ರ ಕಡಿಮೆಯಾಗುತ್ತಿದ್ದು, ಕೃಷಿ ಉತ್ಪಾದನೆ ಹೆಚ್ಚಳ ಮಾಡುವ ಅಗತ್ಯವಿದೆ. ದೇಶದಲ್ಲಿ ಮುಂಬರುವ ದಿನಗಳಲ್ಲಿ ಹೊಸ ತಂತ್ರಜ್ಞಾನಗಳ ಮೂಲಕ ಜಲ ಕೃಷಿ, ಗಾಳಿ ಕೃಷಿಗೆ ಅಳವಡಿಸಬೇಕಿದೆ. ಸೋಯಾಬಿನ್ ಉತ್ಪಾದನೆಯಲ್ಲಿ ಮಧ್ಯಪ್ರದೇಶ ಪ್ರಥಮ ಸ್ಥಾನದಲ್ಲಿದ್ದು, ಇದಕ್ಕೆ ಜೈವಿಕ, ಸಾವಯವ ಕೃಷಿ ಕಾರಣವಾಗಿದೆ. ಕರ್ನಾಟಕದಲ್ಲಿಯೂ ಸಹ ಸಾವಯವ ಹಾಗೂ ನೈಸರ್ಗಿಕ ಕೃಷಿಗೆ ಒತ್ತು ನೀಡಲಾಗುತ್ತೆದೆ ಎಂದರು.

ಮಣ್ಣಿನ ಗುಣಮಟ್ಟ ಸಂರಕ್ಷಿಸಬೇಕು, ಮಣ್ಣು ತನ್ನಸತ್ವಕಳೆದುಕೊಂಡರೆಉತ್ಪಾದನೆಯನ್ನು ಸಮಸ್ಯೆಯಾಗುತ್ತದೆ. ಕೃಷಿ ಉತ್ಪಾದನೆಯಲ್ಲಿ ಇನ್ನೊಂದು ಹಸಿರು ಕ್ರಾಂತಿಯ ಅಗತ್ಯವಿದ್ದು, ಹೊಸ ತಂತ್ರಜ್ಞಾನಗಳನ್ನು ಬಳಸಿ ಉತ್ಪಾದನೆ ಹೆಚ್ಚಳಗೊಳಿಸಬೇಕೆಂದರು.

ಧಾರವಾಡ ಕೃಷಿ ವಿಶ್ವವಿದ್ಯಾಲಯ ಕುಮಾರಿ ಶ್ರಿಯಾ ಎಸ್ ಕರಿ ಕೃಷಿ ಪದವಿಯಲ್ಲಿ ಒಟ್ಟು ಮೂರು ಚಿನ್ನದ ಪದಕಗಳನ್ನು ಪಡೆದರು. ಹನಮನಮಟ್ಟಿ ಕೃಷಿ ಮಹಾವಿದ್ಯಾಲಯದ ಕುಮಾರ ಮಾಹಾಂತೇಶ ಹಿರೇಮಠ ಹಾಗೂ ಸಮುದಾಯ ವಿಜ್ಞಾನ ಮಹಾವಿದ್ಯಾಲಯದ ಕುಮಾರಿ ರೋಹಿಣಿ ರಮೇಶ ಭಾವಿಕಟ್ಟಿ ತಲಾ ಎರಡು ಚಿನ್ನದ ಪದಕಗಳನ್ನು ಪಡೆದುಕೊಂಡರು.

# ಪರಿಹಾರ ಒದಗಿಸಲು ಮನವಿ



**ನವಲಗುಂದ** : ವಿಧಾನಸಭಾ ಕ್ಷೇತ್ರದಲ್ಲಿ ಪರಿಹಾರದ ಸಮಸ್ಯೆಯಾಗಿದ್ದು ಜಿಲ್ಲಾಧಿಕಾರಿಗಳು ಸ್ವಲ್ಪ ಮುತುವರ್ಜಿ ವಹಿಸಿ ರೈತರಿಗೆ ಕೂಡಲೇ ಪರಿಹಾರವನ್ನು ಒದಗಿಸುವ ಕೆಲಸವಾಗಲಿ ಎಂದು ಜಿಲ್ಲಾಧಿಕಾರಿ ದಿವ್ಯಪ್ರಭಾ ಅವರಲ್ಲಿ ಶಾಸಕ ಎನ್ ಎಚ್ ಕೋನರಡ್ಡಿ ಮನವಿ ಮಾಡಿದರು.

ಪಟ್ಟಣದ ಶಿಕ್ಷಕರ ಸಹಕಾರಿ ಕಲ್ಯಾಣ ಕೇಂದ್ರದಲ್ಲಿ ಜಿಲ್ಲಾಡಳಿತದಿಂದ ಹಮ್ಮಿಕೊಂಡ ಜನಸ್ಪಂದನ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು ಸಾಮಾನ್ಯ ಕೆಲಸಕ್ಕೂ ಜನರು ಅಲೆದಾಡುವ ಪರಿಸ್ಥಿತಿಯಾಗಬಾರದು ಸಾರ್ವಜನಿಕರು ಒಂದು ಅರ್ಜಿಕೊಟ್ಟರೆಅಧಿಕಾರಿಗಳುಕಾಲಮಿತಿಹಾಕಿಕೊಂಡು ಕ್ರಮಬದ್ಧವಾಗಿಕೆಲಸಮಾಡಿದರೆಜನರಿಗೆಆಗುತ್ತಿರುವ ತೊಂದರೆ ತಪ್ಪಿಸಬಹುದು ಎಂದರು. ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ಗೋಪಾಲ ಬ್ಯಾಕೋಡ ನವಲಗುಂದ ತಹಸೀಲ್ದಾರ್ ಮಲ್ಲಿಕಾರ್ಜುನ ಸಾಹುಕಾರ್ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕಾ ಮಟ್ಟದ ಅಧಿಕಾರಿಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

# ಕನಕಗಿರಿ: ಜಿಲ್ಲಾಧಿಕಾರಿಗಳಿಂದ ಜನತಾ ದರ್ಶನ: 249 ಅರ್ಜಿಗಳು ಸ್ವೀಕಾರ



**ಕೊಪ್ಪಳ** : ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಜೂನ್ 26ರಂದು ಕನಕಗಿರಿ ತಾಲೂಕಿಗೆ ಭೇಟಿ ನೀಡಿ ಜನಸ್ಪಂದನ ಕಾರ್ಯಕ್ರಮದಡಿ ಸಾರ್ವಜನಿಕರ ಅಹವಾಲು ಆಲಿಸಿದರು.

ನಗರದ ಎ.ಪಿ.ಎಂ.ಸಿ. ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಂದಾಯ ಇಲಾಖೆಗೆ ಅತೀ ಹೆಚ್ಚು 90 ಅರ್ಜಿಗಳು ಸ್ವೀಕೃತವಾದವು. ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಇಲಾಖೆಗೆ 40, ನಗರಾಭಿವೃದ್ಧಿ ಇಲಾಖೆಗೆ 36, ಶಾಲಾ ಶಿಕ್ಷಣ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಗೆ ತಲಾ 15, ಇಂಧನ ಇಲಾಖೆಗೆ 9, ಸಾರಿಗೆ ಇಲಾಖೆಗೆ 8, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 7, ಆರೋಗ್ಯ ಇಲಾಖೆಗೆ 5, ಆಹಾರ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗೆ ತಲಾ 4, ಕೃಷಿ ಇಲಾಖೆ ಮತ್ತು ಪಶುಪಾಲನಾ ಇಲಾಖೆಗೆ ತಲಾ 3, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಗೆ ತಲಾ 2, ಅರಣ್ಯ ಇಲಾಖೆ, ಉನ್ನತ ಶಿಕ್ಷಣ, ಪೊಲೀಸ್ ಇಲಾಖೆ, ತೋಟಗಾರಿಕಾ ಇಲಾಖೆ, ವಸತಿ ಇಲಾಖೆ ಮತ್ತು ಕೌಶಲಾಭಿವೃದ್ಧಿ ಇಲಾಖೆಗೆ ತಲಾ 1 ಸೇರಿ ಜನತಾ ದರ್ಶನದಲ್ಲಿ ಒಟ್ಟು 249 ಅರ್ಜಿಗಳು ಸ್ವೀಕೃತವಾದವು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಾದ ರಾಹುಲ್ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಸಹಾಯಕ ಆಯುಕ್ತರಾದ ಕ್ಯಾಪ್ಟನ್ ಮಹೇಶ ಮಾಲಗಿತ್ತಿ ಅವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳು ಬೆಳಗ್ಗೆಯಿಂದ ಸಂಜೆವರೆಗೂ ಅಹವಾಲು ಆಲಿಸಿ ಸಾರ್ವಜನಿಕರ ಅರ್ಜಿಗಳನ್ನು ಪರಿಶೀಲಿಸಿದರು. ಸ್ವೀಕೃತವಾದ ನಾನಾ ಅರ್ಜಿಗಳ ಬಗ್ಗೆ ಆಯಾ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಜಿಲ್ಲಾಧಿಕಾರಿಗಳು, ಕೆಲವು ಅರ್ಜಿಗಳನ್ನು ಸ್ಥಳದಲ್ಲಿಯೇ ವಿಲೇ ಮಾಡಿದರು.

ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಜಂಟಿಯಾಗಿ ತಾಲೂಕುಮಟ್ಟದಲ್ಲಿ ಜನಸ್ಪಂದನ ಕಾರ್ಯಕ್ರಮ ಹಮ್ಮಿಕೊಳ್ಳಬೇಕು ಎನ್ನುವ ರಾಜ್ಯ ಸರ್ಕಾರದ ನಿರ್ದೇಶನದಂತೆ ಜಿಲ್ಲೆಯಾದ್ಯಂತ ಜನಸ್ಪಂದನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಲ್ಲಿ ಸ್ವೀಕೃತವಾಗುವ ಮನವಿ ಕೋರಿಕೆಗಳ ಮೇಲೆ ಕ್ರಮಕೈಗೊಂಡು ಮಾನ್ಯ ಮುಖ್ಯಮಂತ್ರಿಗಳ ನಿರ್ದೇಶನದಂತೆ ಮಾನ್ಯ ಸರ್ಕಾರದ ಕಾರ್ಯದರ್ಶಿಗಳಿಗೆ ವರದಿ ನೀಡಲಾಗುತ್ತದದೆ. ಮೊದಲನೇಯದಾಗಿ ಕನಕಗಿರಿ ತಾಲೂಕಿನಲ್ಲಿ ಜನತಾ ದರ್ಶನ ಕಾರ್ಯಕ್ರಮ ಹಮ್ಮಿಕೊಂಡಿದ್ದು ಇಲ್ಲಿ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ ಕ್ರಮಕ್ಕಾಗಿ ಆಯಾ ಇಲಾಖೆಗಳಿಗೆ ವರ್ಗಾಯಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಜಿಲ್ಲಾ ಪಂಚಾಯತ್ ಸಿಇಓ ಅವರು ಮಾತನಾಡಿ, ಸಾರ್ವಜನಿಕರಿಗೆ ಸರ್ಕಾರದ ನಾನಾ ಯೋಜನೆಗಳ ಬಗ್ಗೆ ಸರಿಯಾದ ಮಾಹಿತಿ ನೀಡಬೇಕು. ಗ್ರಾಮಮಟ್ಟದಲ್ಲಿ, ತಾಲೂಕುಮಟ್ಟದಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಯೋಜನೆಗಳ ಬಗ್ಗೆ ಪರಿಪೂರ್ಣ ಮಾಹಿತಿ ನೀಡಿದಲ್ಲಿ ಜನರಿಗೆ ಯೋಜನೆಗಳಿಂದ ಅನುಕೂಲವಾಗಿ ಜನರು ಅರ್ಜಿಗಳನ್ನು ಹಿಡಿದು ಕಚೇರಿಗಳಿಗೆ ಅಲೆಯುವುದು ತಪ್ಪುತ್ತದೆ ಎಂದು ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಮಾತನಾಡಿ, ಸಾರ್ವಜನಿಕರು ಸರ್ಕಾರದ ಬೇರೆ ಬೇರೆ ಯೋಜನೆಗಳ ಅನುಕೂಲ ಪಡೆದುಕೊಳ್ಳುವುದರ ಜೊತೆಗೆ ತಮ್ಮ ಕರ್ತವ್ಯ ಏನು ಎಂಬುದನ್ನು ಅರಿತು ಶಾಂತಿ ಪಾಲನೆಗೆ ಸಹಕಾರ ನೀಡಬೇಕು. ಕಳ್ಳತನ, ಧರೋಡೆಯಂತಹ ಪ್ರಕರಣಗಳಿಗೆ ಅವಕಾಶ ಮಾಡಿಕೊಡಬಾರದು. ಸಾರ್ವಜನಿಕರಿಗೆ ಏನೇ ತೊಂದರೆಯಾದಲ್ಲಿ ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು. ಜಿಲ್ಲಾ ಪೊಲೀಸ್ ಇಲಾಖೆಯು ಸದಾಕಾಲ ಸಾರ್ವಜನಿಕರ ಜೊತೆಗೆ ಇರುತ್ತದೆ ಎಂದು ತಿಳಿಸಿದರು.

ಜನತಾ ದರ್ಶನ ಕಾರ್ಯಕ್ರಮದಲ್ಲಿ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಕಾವ್ಯರಾಣಿ ಕೆ.ವಿ., ತಹಸೀಲ್ದಾರರಾದ ವಿಶ್ವನಾಥ ಮುರುಡಿ, ಜಂಟಿ ಕೃಷಿ ನಿರ್ದೇಶಕರಾದ ರುದ್ರೇಶಪ್ಪ ಟಿ.ಎಸ್ ಸೇರಿದಂತೆ ವಿವಿಧ ಇಲಾಖೆಯ ಜಿಲ್ಲಾಮಟ್ಟದ ಅಧಿಕಾರಿಗಳು ಹಾಜರಿದ್ದರು.

# ವಾಂತಿ ಭೇದಿ ಪ್ರಕರಣಗಳಲ್ಲಿ ಮುಂಜಾಗ್ರತ ಕ್ರಮ ಅನುಸರಿಸಲು ಸೂಚನೆ

**ಕೊಪ್ಪಳ** : ಕೊಪ್ಪಳ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಹೆಚ್ಚು ವಾಂತಿ ಭೇದಿ ಪ್ರಕರಣಗಳು ದಾಖಲಾಗುತ್ತಿದ್ದು, ಸಾರ್ವಜನಿಕರು ಇದರ ಬಗ್ಗೆ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಬೇಕು ಎಂದು ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ತಿಳಿಸಿದ್ದಾರೆ.

ಮಳೆಗಾಲ ಆರಂಭವಾಗಿರುವುದರಿಂದ ಕಲುಷಿತ ನೀರು ಶುದ್ಧ ಕುಡಿಯುವ ನೀರಿನೊಂದಿಗೆ ಬೆರೆತು ಅಥವಾ ಪೈಪ್ ಲೈನ್‌ಗಳಲ್ಲಿ ಬೆರೆತು ಕುಡಿಯುವ ನೀರಿನ ಮಾಲಿನ್ಯವಾಗುವ ಸಾಧ್ಯತೆ ಇರುತ್ತದೆ. ಇಂತಹ ಕಲುಷಿತಗೊಂಡ ನೀರನ್ನು ಕುಡಿಯುವುದರಿಂದ ಮತ್ತು ಇತರೆ ಸೇವನೆಯ ಪದಾರ್ಥಗಳೊಂದಿಗೆ ಬಳಸುವುದರಿಂದ ವಾಂತಿ ಬೇಧಿ ಮುಂತಾದ ಖಾಯಿಲೆಗಳು ಬರುವ ಸಾಧ್ಯತೆ ಇದ್ದು, ಸಾರ್ವಜನಿಕರು ಆರೋಗ್ಯವನ್ನು ಕಾಪಾಡಿಕೊಳ್ಳಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಪಾಲಿಸಬೇಕು.

ಮುಂಜಾಗ್ರತಾ ಕ್ರಮಗಳು: ಮಲಮೂತ್ರ ವಿಸರ್ಜನೆಗಾಗಿ ತಪ್ಪದೇ ಶೌಚಾಲಯ ಬಳಸಬೇಕು. ಶುದ್ಧೀಕರಿಸಿದ ನೀರು ಅಥವಾ ಕುದಿಸಿ ಆರಿಸಿದ ನೀರನ್ನು ಕುಡಿಯಬೇಕು. ಕೈಗಳನ್ನು ಸಾಬೂನು ಮತ್ತು ನೀರಿನಿಂದ ಕನಿಷ್ಟ 40 ಸೆಕೆಂಡ್ ತೊಳೆದುಕೊಂಡು ನಂತರ ಆಹಾರ ಸೇವಿಸಬೇಕು. ಸುರಕ್ಷಿತ ಆಹಾರ ಮತ್ತು ನೀರನ್ನು ಮಾತ್ರ ಸೇವಿಸಬೇಕು. ಆದಷ್ಟು ಮನೆಯ ಆಹಾರಕ್ಕೆ ಆದ್ಯತೆ ನೀಡಬೇಕು. ಕುಡಿಯುವ ನೀರಿನ ಸಂಗ್ರಹಗಳ ಮೇಲೆ ತಪ್ಪದೇ ಮುಚ್ಚಳ ಮುಚ್ಚಬೇಕು. ಆಹಾರ ತಯಾರಿಸಿದ ನಂತರ ಪಾತ್ರೆಯನ್ನು ಸರಿಯಾಗಿ ಮುಚ್ಚಬೇಕು.

ಶುದ್ಧೀಕರಿಸದೇ ಇರುವ ಅಥವಾ ಕೆರೆ ಕುಂಟೆಗಳ ನೀರನ್ನು ನೇರವಾಗಿ ಕುಡಿಯಬಾರದು. ಬಯಲುಗಳಲ್ಲಿ ಮಲಮೂತ್ರಗಳನ್ನು ವಿಸರ್ಜನೆ ಮಾಡಬಾರದು. ಕೈಗಳನ್ನು ತೊಳೆಯದೇ ಆಹಾರ ಸೇವಿಸಬಾರದು. ಹೊರಗಡೆ ಅಥವಾ ರಸ್ತೆ ಬದಿ ತೆರೆದಿಟ್ಟ ಆಹಾರ ಪದಾರ್ಥ ಮತ್ತು ಕತ್ತರಿಸಿ ಇಟ್ಟ ಹಣ್ಣುಗಳನ್ನು ತಿನ್ನಬಾರದು. ತಯಾರಿಸಿದ ಆಹಾರ ಮುಚ್ಚಳ ಮುಚ್ಚದಂತೆ ಇಡಬೇಡಿ, ಸಂಗ್ರಹಿಸಿದ ನೀರಿನ ಮೇಲೆ ಮುಚ್ಚಳ ಮುಚ್ಚದೇ ಬಿಡಬಾರದು. ಇವುಗಳ ಬಗ್ಗೆ ಬಹಳ ಎಚ್ಚರ ವಹಿಸಬೇಕು.

ಕುಡಿಯುವ ನೀರನ್ನು ಶೋಧಿಸಿ ಕನಿಷ್ಟ 20 ನಿಮಿಷಗಳಕಾಲ ಚೆನ್ನಾಗಿ ಕುದಿಸಿ ಆರಿಸಿದ ನಂತರ ಕುಡಿಯಬೇಕು.

ವಾಂತಿ ಭೇದಿ ಸಂದರ್ಭದಲ್ಲಿ ಓ.ಆರ್.ಎಸ್. ದ್ರಾವಣ ತಯಾರಿಸಿದ ನಂತರ 24 ಗಂಟೆಯೊಳಗೆ ಬಳಸಬೇಕು (ಲೀಟರ್ ನೀರಿಗೆ 1 ಪೊಟ್ಟಣದ ಪುಡಿ ಸಂಪೂರ್ಣ ಹಾಕಬೇಕು). ವಾಂತಿ ಭೇದಿಯಾದಾಗ ಮನೆಯಲ್ಲಿ ಗಂಜಿ, ತಿಳಿಬೇಳೆ, ನಿಂಬು ಪಾನಕಾ, ಎಳನೀರನ್ನು ಕೊಡುವುದನ್ನು ಮುಂದುವರೆಸಬೇಕು. ಕುಡಿಯುವ ನೀರಿನ ಮೂಲ ಮತ್ತು ಅದರ ಶುದ್ಧತೆ ಬಗ್ಗೆ ಪರೀಕ್ಷಿಸುವುದು ಮತ್ತು ಅವುಗಳನ್ನು ಕಾಯಿಸಿ ಆರಿಸಿ ಕುಡಿಯಬೇಕು.

ಜಿಲ್ಲೆಯಲ್ಲಿ ಯಾವುದೇ ವ್ಯಕ್ತಿಯಲ್ಲಿ ವಾಂತಿ ಭೇದಿ ಉಂಟಾದರೆ ನಿರ್ಲಕ್ಷ ಮಾಡದೇ ತಕ್ಷಣ ಹತ್ತಿರದ ಆರೋಗ್ಯ ಕಾರ್ಯಕರ್ತರನ್ನು ಅಥವಾ ಆರೋಗ್ಯ ಕೇಂದ್ರಕ್ಕೆ ತಕ್ಷಣ ಭೇಟಿ ನೀಡಬೇಕು ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ದೂರದೃಷ್ಟಿತ್ವದ ಯೋಜನಾ ನಿಪುಣ ಕೆಂಪೇಗೌಡರು: ಸಂತೋಷ ಬಂಡೆ



**ಇಂಡಿ** : ಕೆಂಪೇಗೌಡರು ಎಲ್ಲ ಜಾತಿ, ಸಮುದಾಯದವರಿಗೆ ನೆಲೆ ಕಲ್ಪಿಸಿಕೊಟ್ಟು, ಬೆಂಗಳೂರು ನಗರವನ್ನು ನಿರ್ಮಿಸಿ, ಸರ್ವಧರ್ಮ ಸಹಿಷ್ಣುತೆಯ ಪ್ರಜಾನಾಯಕರಾಗಿದ್ದು ಇಂದಿಗೂ ಆದರ್ಶಪ್ರಾಯವಾಗಿದೆ ಎಂದು ಶಿಕ್ಷಕ ಸಂತೋಷ ಬಂಡೆ ಹೇಳಿದರು.

ಅವರು ತಾಲೂಕಿನ ಹಿರೇರೂಗಿ ಗ್ರಾಮದ ಕೆಬಿಎಸ್, ಕೆಜಿಎಸ್, ಯುಬಿಎಸ್ ಶಾಲೆಯ ವತಿಯಿಂದ ಹಮ್ಮಿಕೊಂಡ ನಾಡಪ್ರಭು ಕೆಂಪೇಗೌಡರ ಜಯಂತಿ ಆಚರಣೆಗೆ ಚಾಲನೆ ನೀಡಿ ಮಾತನಾಡಿದರು.

ಕೆಂಪೇಗೌಡರ ವಿವೇಚನಾಯುತ ಯೋಜನೆ ಮತ್ತು ಕತೃತ್ವಶಕ್ತಿಯ ವ್ಯಕ್ತಿತ್ವ ಎಲ್ಲರಿಗೂ ಪ್ರೇರಕಶಕ್ತಿಯಾಗಿದೆ.

ಅವರು ಯೋಜನಾನಿಪುಣ ಹಾಗೂ ವಿಚಾರವಾದಿಯಾಗಿ ದೂರದೃಷ್ಟಿತ್ವದೊಂದಿಗೆ ಬೆಂಗಳೂರು ನಗರ ನಿರ್ಮಾಣ ಮಾಡಿದ್ದು ಐತಿಹಾಸಿಕವಾಗಿದೆ ಎಂದು ಹೇಳಿದರು.

ಶಿಕ್ಷಕಿ ಎಸ್ ಡಿ ಬಿರಾದಾರ ಮಾತನಾಡಿ, ಶತಶತಮಾನಗಳು ಕಳೆದರೂ ನಾಡಿನ ಜನರು ಮೆಲುಕು ಹಾಕುವ ರೀತಿಯಲ್ಲಿ ಕೆಂಪೇಗೌಡರು ಸುಮಾರು 48 ವರ್ಷಗಳ ಕಾಲಆಳ್ವಿಕೆನಡೆಸಿದ್ದು,ಅವರದೂರದೃಷ್ಟಿತ್ವದ ಆಡಳಿತ ಇಂದಿನ ಆಡಳಿತ ವ್ಯವಸ್ಥೆಗೆ ಮಾದರಿಯಾಗಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕೆಬಿಎಸ್ ಮುಖ್ಯ ಶಿಕ್ಷಕ ಅನಿಲ ಪತಂಗಿ ಮಾತನಾಡಿ, ಬೆಂಗಳೂರು ಇಂದುಜಾಗತಿಕಮಟ್ಟದಲ್ಲಿಗಮನಸೆಳೆದಿದ್ದು, ಐಟಿ ಬಿಟಿ ಕಂಪನಿಗಳ ತವರೆನಿಸಿಕೊಂಡಿದೆ. ಬೆಂಗಳೂರು ಕೆಂಪೇಗೌಡರ ಕಾಲದಲ್ಲೂ ವಾಣಿಜ್ಯ ಕೇಂದ್ರವಾಗಿತ್ತು. ಆಯಾ ಕುಲ ಕಸಬುದಾರರಿಗೆ ಪೇಟೆಗಳನ್ನು ಕಟ್ಟಿಕೊಟ್ಟು, ವ್ಯಾಪಾರಕ್ಕೆ ಅನುವು ಮಾಡಿಕೊಟ್ಟಿದ್ದರು ಎಂದು ಹೇಳಿದರು.

ಮುಖ್ಯ ಶಿಕ್ಷಕರಾದ ವ್ಹಿ ವೈ ಪತ್ತಾರ, ಎ ಎಂ ಬೆದ್ರೇಕರ ಹಾಗೂ ಶಿಕ್ಷಕರಾದ ಎಸ್ ಎಸ್ ಅರಬ,ಜೆ ಎಂ ಪತಂಗಿ, ಎಸ್ ಎಂ ಪಂಚಮುಖಿ, ಎಸ್ ಬಿ ಕುಲಕರ್ಣಿ, ಸಾವಿತ್ರಿ ಸಂಗಮದ, ಎನ್ ಬಿ ಚೌಧರಿ, ಎಸ್ ಪಿ ಪೂಜಾರಿ, ಎಸ್ ಎನ್ ಡಂಗಿ, ಜೆ ಸಿ ಗುಣಕಿ, ಎಸ್ ವ್ಹಿ ಬೇನೂರ, ಎಫ್ ಎ ಹೊರ್ತಿ, ಶಾಂತೇಶ ಹಳಗುಣಕಿ, ಸುರೇಶ ದೊಡ್ಯಾಳಕರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಹಿರೇಸಿಂದೋಗಿ: ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನ

**ಕೊಪ್ಪಳ** : ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿರೇಸಿಂದೋಗಿಯ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ವಿಜ್ಞಾನ ಕಾಲೇಜಿನಲ್ಲಿ ಖಾಲಿ ಇರುವ ಆಂಗ್ಲಭಾಷಾ ವಿಷಯದ ಬೋಧನೆಗೆ ಅತಿಥಿ ಉಪನ್ಯಾಸಕರಹುದ್ದೆಗೆಆಸಕ್ತ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ.

ಅಭ್ಯರ್ಥಿಗಳು ಎಂ.ಎ.ಬಿ.ಎಡ್ ವಿದ್ಯಾರ್ಹತೆ ಹೊಂದಿರಬೇಕು. ಅಭ್ಯರ್ಥಿಯನ್ನು ವಿದ್ಯಾರ್ಥಿಗಳು ಹಾಕುವ ಮತಗಳಿಂದ ಆಯ್ಕೆ ಮಾಡಲಾಗುವುದು (ಮಾದರಿ ಪಾಠ ಬೋಧನೆ ಆಧಾರದ ಮೇಲೆ). ನೇರವಾಗಿ ವಸತಿ ಕಾಲೇಜಿನಲ್ಲಿ ಅರ್ಜಿ ಪಡೆದು ಸಂಬಂಧಿಸಿದ ವಿದ್ಯಾರ್ಹತೆಯ ಎಲ್ಲಾ ದಾಖಲೆಗಳನ್ನು ಲಗತ್ತಿಸಿ ಸಲ್ಲಿಸಬೇಕು. ಆಯ್ಕೆಯಾದ ಅಭ್ಯರ್ಥಿಗೆ ಕವಶಿಸ ಸಂಘ ಬೆಂಗಳೂರು ರವರು ನಿಗದಿಪಡಿಸಿರುವ ವೇತನ ನೀಡಲಾಗುವುದು.

ಅರ್ಜಿ ಸಲ್ಲಿಸಲು ಜುಲೈ 02 ಕೊನೆಯ ದಿನವಾಗಿದೆ. ಜುಲೈ 03 ರಂದು ಮಾದರಿ ಪಾಠ ಬೋಧನಾ ಪ್ರಕ್ರಿಯೆ ನಡೆಸಲಾಗುವುದು. ಮಾದರಿ ಪಾಠ ಬೋಧನೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಟಿಎ ಮತ್ತು ಡಿಎ ನೀಡಲಾಗುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಶರ-ಣಗೌಡ, ಪ್ರಾಂಶುಪಾಲರು, ಮೊದೇಪಪೂವವಿಕಾ ಹಿರೇಸಿಂದೋಗಿ : 7411999371, ಪರಶುರಾಮ ಬಿ ದ್ವಿ.ದ.ಸಹಾಯಕ: 9019531301 ಇವರನ್ನು ಸಂಪರ್ಕಿಸಬಹುದು ಎಂದು ಕಾಲೇಜಿನ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕುಷ್ಟಗಿ ಪುರಸಭೆ: ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

**ಕೊಪ್ಪಳ** : ಕುಷ್ಟಗಿ ಪುರಸಭೆ ವ್ಯಾಪ್ತಿಯಲ್ಲಿ 2024-25ನೇ ಸಾಲಿನ ಡೇ ನಲ್ಮ್ ವಿಭಾಗದಿಂದ ವಿವಿಧ ಘಟಕವಾರು ಸಾಲ ಸೌಲಭ್ಯ ನೀಡಲಾಗುತ್ತಿದ್ದು, ಅರ್ಹ ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸ್ವ ಸಹಾಯ ಗುಂಪು ರಚನೆ, ಸ್ವ ಸಹಾಯ ಗುಂಪುಗಳಿಗೆ ಕ್ರೆಡಿಟ್ ಲಿಂಕೇಜ್ ಸಾಲ ಸೌಲಭ್ಯ, ಸ್ವ-ಯಂ ಉದ್ಯೋಗಕ್ಕಾಗಿ ವ್ಯಾಪಾರಸ್ಥರಿಗೆ ಸಾಲ ಸೌಲಭ್ಯ, ಪ್ರದೇಶ ಮಟ್ಟದ ಒಕ್ಕೂಟ ರಚನೆ ಗಾಗಿ ಪುರಸಭೆ ವತಿಯಿಂದ ಸಾಲ ಸೌಲಭ್ಯ ನೀಡಲಾಗುತ್ತದೆ.

ಅರ್ಹ ಫಲಾನುಭವಿಗಳು ಜಾತಿ ಮತ್ತು ಆದಾಯ ಪ್ರಮಾಣ ಪತ್ರ,ರೇಷನ್ ಕಾರ್ಡ್,ಮತದಾರರ ಗುರುತಿನ ಚೀಟಿ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್, ಗುಂಪಿನ ಸ್ವವಿವರ ಮಾಹಿತಿ, ಭಾವಚಿತ್ರಗಳೊಮದಿಗೆ ಅರ್ಜಿಯನ್ನುದ್ವಿಪ್ರತಿಯಲ್ಲಿಪುರಸಭೆಕಾರ್ಯಾಲಯಕ್ಕೆ ಜುಲೈ 08 ರೊಳಗಾಗಿ ಸಲ್ಲಿಸಬೇಕು ಎಂದು ಪುರಸಭೆ ಮುಖ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ರಬಕವಿ-ಬನಹಟ್ಟಿ : ಮನೆಯಲ್ಲಿ ಮಹಾಮನೆಯಲ್ಲಿ ಹದಿನೈದನೇ ವಾರ್ಷಿಕೋತ್ಸವದ ಸಮಾರಂಭದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಾಂತಭೀಷ್ಮ ಚೌಡಯ್ಯ ಮಹಾ ಸ್ವಾಮೀಜಿಯವರು, ಶರಣಜೀವಿ ಶಿವಾನಂದ ಈರಪ್ಪ ಕೊಳಕಿ ಅವರಿಗೆ ಸಮಾಜ ಸೇವಾ ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದರು. ಈ ಕಾರ್ಯಕ್ರಮದಲ್ಲಿ ಪೂಜ್ಯ ಗುರುಸಿದ್ದೇಶ್ವರ ಸ್ವಾಮೀಜಿ, ಹಾಗೂ ಶ್ರೀ ಪರಮಪೂಜ್ಯ ಮಹಾದೇವಾನಂದ ಸರಸ್ವತಿ ಸ್ವಾಮೀಜಿ, ಶಿವಾನಂದ ಭಸ್ಮೆ ಮಹಾರಾಜರು ಹಾಗೂ ಐ. ಆರ್. ಮಠಪತಿ ಶರಣರು, ಮಹಾಂತ ಶರಣರು ಉಪಸ್ಥಿತರಿದ್ದರು.

# ಕೃಷ್ಣಾ ನದಿ ತೀರದಲ್ಲಿ ಅಕ್ರಮ ಮಣ್ಣು ಮಾಫಿಯಾ

**ಅಥಣಿ :** ಕೃಷ್ಣಾ ನದಿಯಲ್ಲಿ ನೀರು ಕಡಿಮೆಯಾದರೆ ಸಾಕು, ಅಕ್ರಮ ಚಟುವಟಿಕೆಗಳು ನಡೆಸುವವರಿಗೆ ಸು-ಗಿಯೋ ಸುಗ್ಗಿ. ಹಿಂದಿನ ವರ್ಷಗಳಲ್ಲಿ ನದಿ ತೀರದ ಅನೇಕ ಗ್ರಾಮಗಳಲ್ಲಿ ಮರಳು ಮಾಫಿಯಾ ರಾಜಾರೋಷವಾಗಿ ನಡೆಯುತ್ತಿತ್ತು. ಆದರೆ ಈ ಬಾರಿ ನದಿಯ ತೀರದ ಗ್ರಾಮಗಳಲ್ಲಿ ಅಕ್ರಮ ಮಣ್ಣು ಸಾಗಿಸುವ ಮಾಫಿಯಾ ವ್ಯವಸ್ಥಿತವಾಗಿ ನಡೆಯುತ್ತಿದೆ.

ಕಳೆದ ಒಂದು ವಾರದಿಂದ ಕೃಷ್ಣಾ ನದಿ ನೀರು ಇಳಿದ ಮೇಲೆ ಉಳಿದ ಫಲವತ್ತಾದ ಮಣ್ಣನ್ನು ತುಂಬಿ ಮಾರಾಟ ಮಾಡುತ್ತಿರುವ ದೊಡ್ಡ ದಂಧೆ ಅವರಖೋಡ, ಹುಲಗಬಾಳ , ಮಹಿಷವಾಡಗಿ, ನಾಗನೂರ ಪಿಕೆ , ನದಿ ಇಂಗಳಗಾವ, ಸಪ್ತಸಾಗರ, ತೀರ್ಥ. ಶಿರಹಟ್ಟಿ ಇನ್ನಿತರ ಗ್ರಾಮಗಳಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿದ್ದು, ನದಿ ತೀರದ ಅನೇಕ ಗ್ರಾಮಗಳಲ್ಲಿ ಜೆಸಿಬಿ, ಟ್ಯಾಕ್ಟರ್ ಬುಲ್ಡೋಜರ್ ಸಹಾಯದಿಂದ ಫಲವತ್ತಾದ ಮಣ್ಣನ್ನು ಟ್ರ್ಯಾಕ್ಟರ್ ಮತ್ತು ಟಿಪ್ಪರ್ ಗಳ ಮೂಲಕ ತುಂಬಿ ಬೇರಡೆಗೆ ಸಾಗಿಸುವ ದೃಶ್ಯಗಳು ಸಾಮಾನ್ಯವಾಗಿವೆ.

ತಡ ರಾತ್ರಿಯ ನಂತರ ಆರಂಭವಾಗುವ ಈ ಮಣ್ಣು ಮಾಫಿಯಾ ಯಾವುದೇ ಅಧಿಕೃತ ಇಲಾಖೆಯ ಅನುಮತಿ ಇಲ್ಲದೇ ರಾಜಾರೋಷವಾಗಿ ನಡೆ-ಯುತ್ತಿದ್ದು, ಪೊಲೀಸ್ ಠಾಣೆಗಳ ಮುಂದೆಯೇ ಅಕ್ರಮವಾಗಿ ನದಿ ಮಣ್ಣು ಸಾಗಾಣಿಕೆಯಾಗುತ್ತಿದ್ದರೂ ಕಂಡು ಕಾಣದಂತೆ ಮೌನವಾಗಿರುವುದು ಹಲವು ಅನುಮಾನಗಳಿಗೆ ಎಡೆ ಮಾಡಿದೆ . ಪೊಲೀಸ್ ಇಲಾಖೆ ಸೇರಿದಂತೆ ಬೇರೆ ಬೇರೆ ಇಲಾಖೆಯ ಅಧಿಕಾರಿಗಳು ಈ ಅಕ್ರಮ ದಂಧೆಯಲ್ಲಿ ಶಾಮೀಲಾಗಿದ್ದಾರೆ ಎಂಬುದು ಸಾರ್ವಜನಿಕರ ಆರೋಪವಾಗಿದೆ. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಲೆಕ್ಕಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಅಕ್ರಮ



ದಂದೆಗೆ ಕಡಿವಾಣ ಹಾಕದಿರುವುದು ವಿಪರ್ಯಾಸದ ಸಂಗತಿಯಾಗಿದೆ.

ಈ ರೀತಿ ನದಿಯ ಮಣ್ಣನ್ನು ಒಯ್ದ-ರೇ ನದಿಯಲ್ಲಿರುವ ಹೂಳು ಕಡಿಮೆ ನದಿಯ ಸಾಂದ್ರತೆ ಕಡಿಮೆಯಾಗುತ್ತದೆ. ಸವಳು ಜವಳು ಸಮಸ್ಯೆ, ನೆರೆ ಹಾವಳಿ ಸಂದರ್ಭದಲ್ಲಿ ನದಿಯ ಸ್ವರೂಪ ಬದಲಾವಣೆಯಾಗಿ ತೊಂದರೆ ಅನುಭವಿಸಬೇಕಾಗುತ್ತದೆ. ಇದರ ಬಗ್ಗೆ ಅನೇಕ ದುಷ್ಪರಿಣಾಮಗಳು ಗೊತ್ತಿದ್ದರೂ ಕೂಡ ಕೆಲ ದಲ್ಲಾಳಿಗಳು, ಪ್ರಭಾವಶಾಲಿ ವ್ಯಕ್ತಿಗಳು ಇದರಲ್ಲಿ ಪರೋಕ್ಷವಾಗಿ ಭಾ-ಗಿಯಾಗಿ ಮಣ್ಣನ್ನು ಅಧಿಕ ಬೆಲೆಗೆ ರೈತರಿಗೆ ಮತ್ತು ಇಟ್ಟಿಗೆ ತಯಾರಿಕಾ ಘಟಕಗಳಿಗೆ ಮಾರಾಟ ಮಾಡುತ್ತಿದ್ದಾರೆ.

**ನೆರೆಯ ಮಹಾರಾಷ್ಟ್ರ ರಾಜ್ಯಕ್ಕೂ ನಂಟು :** ನೆರೆಯ ಮಹಾರಾಷ್ಟ್ರದಲ್ಲಿ ಇರುವ ಇಟ್ಟಿಗೆ ತಯಾರಿಕಾ ಘಟಕಗಳಿಗೆ ನದಿ ತೀರದ ಮಣ್ಣು ಬಳಕೆ ಮಾಡುವುದು ನಿಶ್ಚಿತವಾಗಿದ್ದು, ಆದ್ದರಿಂದ ಕೆಲವು ದಲ್ಲಾಳಿಗಳು ಫಲವತ್ತಾದ ಮಣ್ಣನು ನೆರೆ-ಯ ಮಹಾರಾಷ್ಟ್ರಕ್ಕೆ ಸಾಗಿಸಿ ಮಾರಾಟ ಮಾಡುತ್ತಿದ್ದಾರೆ ಎನ್ನುವ ಆರೋಪಗಳು ಕೇಳಿ ಬಂದಿವೆ. ಪ್ರತಿ ಟ್ರ್ಯಾಕ್ಟರ್ ಗೆ ಒಂದು ಸಾವಿರ ರೂ. ಹಾಗೂ ಪ್ರತಿ ಟಿಪ್ಪರಗೂ ಮೂರರಿಂದ ಐದು ಸಾವಿರ ರೂ. ಬೆಲೆ ನಿಗದಿಗೊಳಿಸಿದ್ದು, ಅದನ್ನು ನಿಯಂತ್ರಿಸಲು ಪ್ರಭಾವಿ ವ್ಯಕ್ತಿಯೊಬ್ಬ ಇದ್ದು, ಒಂದು ಟಿಪ್ಪರ್ ಮಣ್ಣು ಒಯ್ದರೇ ಆತನಿಗೆ ಹಣ ನೀಡಬೇಕಾಗುತ್ತದೆ ಎಂದು ಹೆಸರು ಹೇಳಲಿಚ್ಚಿಸದ ನಾಗರಿಕರೊಬ್ಬರು ತಿಳಿಸಿದ್ದಾರೆ.

ರಾಷ್ಟ್ರೀಯ ನದಿ ನೀರು ನಿಯಮಗಳ ಪ್ರಕಾರ ಯಾವುದೇ ನದಿಯ ದಂಡೆಯಲ್ಲಿನ ಮಣ್ಣು ಮತ್ತು ಮರಳು ತೆಗೆಯುವುದು ನಿಷಿದ್ಧ. ಈ ಮಣ್ಣು ಮಾಪಿಯ ನಡೆಯುತ್ತಿರುವ ಪ್ರದೇಶವೆಲ್ಲ ಕೃಷ್ಣಾ ಭಾಗ್ಯ ಜಲ ನಿಗಮಕ್ಕೆ ಸೇರಿದೆ. ವಿಚಿತ್ರವೆಂದರೆ ಅಕ್ರಮ ಮಣ್ಣು ಸಾಗಾಣಿ-ಕೆ ಟಿಪ್ಪರ್ ಗಳು ರಾಜಾರೋಷವಾಗಿ ಪೊಲೀಸ್ ಠಾಣೆಯ ಮುಂದೆ ಹಾದು ಹೋಗುತ್ತಿದ್ದರೂ ಪೊಲೀಸ್ ಅಧಿಕಾರಿಗಳು ಮೂಕ ಪ್ರೇಕ್ಷಕರಾಗಿರುವದು ಹಲವು ಸಂದೇಹಗಳಿಗೆ ಎಡೆ ಮಾಡಿದೆ.ನದಿ ದಂಡೆಯ ಈ ರೀತಿಯ ಮಣ್ಣು ಉತ್ಕೃಷ್ಟ ಮಣ್ಣಾಗಿದ್ದು, ಅದನ್ನು ತೆಗೆದು-ಕೊಂಡು ಕಪ್ಪು ಮಣ್ಣಿನ ಹೊಲಗಳಿಗೆ ಮಿಶ್ರಣ ಮಾಡಲು ಮತ್ತು ಇಟ್ಟಿಗೆಗಳನ್ನು ತಯಾರಿಸುವ ಘಟಕಗಳಿಗೆ ಒಯ್ಯುತ್ತಾರೆ. ಅಥಣಿ ಮತ್ತು ಕಾಗವಾಡ ತಾಲೂಕುಗಳಲ್ಲಿ 80ಕ್ಕೂ ಅಧಿಕ ಅಕ್ರಮ ಇಟ್ಟಿಗೆ ತಯಾರಿಕಾ ಘಟಕಗಳು ಹುಟ್ಟಿಕೊಂಡಿದ್ದು, ಇಟ್ಟಿಗೆ ತಯಾರಿಸಲು ನದಿ ತೀರದ ಈ ಕೆಂಪು ಮಣ್ಣು ಅತ್ಯಧಿಕವಾಗಿ ಬೇಕಾಗುವದರಿಂದ ಈ ಮಣ್ಣಿಗೆ ಬಂಗಾರದ ಬೆಲೆ ಬಂದಿದ್ದು, ಪ್ರತಿನಿತ್ಯ 100 ಕ್ಕೂ ಅಧಿಕ ಟ್ರಿಪ್ ಫಲವತ್ತಾದ ಮಣ್ಣು ಇಲ್ಲಿಂದ ರವಾನೆಯಾಗುತ್ತಿದೆ. ಈಗ ಮಧ್ಯ ರಾತ್ರಿಯಾದರೆ ಈಗ ಪಟ್ಟಣದಲ್ಲಿ ಹಾದು ಹೋಗಿರುವ ಹೆದ್ದಾರಿಯಲ್ಲಿ ಮಣ್ಣು ಹೊತ್ತ ಇದೇ ಟಿಪ್ಪರ್‌ಗಳ ಅಬ್ಬರ ಕೇಳಿ ಬರುತ್ತಿದೆ. ನದಿ ದಡದ ಗ್ರಾಮಗಳಲ್ಲಿ ಜೆಸಿಬಿ, ಟ್ರ್ಯಾಕ್ಟರ್, ಟಿಪ್ಪರ್ ಸಾಲುಗಟ್ಟಿ ನಿಂತಿವೆ. ಇವುಗಳ ಸದ್ದಿಗೆ ಮತ್ತು ಶರವೇಗದಲ್ಲಿ ಹೋಗುವ ವಾಹನಗಳ ರಬಸಕ್ಕೆ ಗ್ರಾಮಸ್ಥರು ಆತಂಕ ಪಡುತ್ತಿದ್ದಾರೆ. ಇಂತಹ ಅಕ್ರಮ ಮಣ್ಣು ಮಾಫಿಯಾದಲ್ಲಿ ಭಾಗಿಯಾದ ವ್ಯಕ್ತಿಗಳನ್ನು ಬಂಧಿಸಿ, ತಕ್ಷಣವೇ ಈ ಆಕ್ರಮ ದಂಧೆಯನ್ನು ನಿಲ್ಲಿಸಿ ಎಂದು ಪ್ರಜ್ಞಾವಂತ ನಾಗರಿಕರು ಆಗ್ರಹಿಸಿದ್ದಾರೆ.

ಈ ವಿಷಯ ಈಗಷ್ಟೇ ನನ್ನ ಗಮನಕ್ಕೆ ಬಂದಿದ್ದು, ನದಿಯ ಮಣ್ಣನ್ನು ಅಕ್ರಮವಾಗಿ ಸಾಗಿಸುವುದು ಅಪರಾಧ. ಕೂಡಲೇ ನಮ್ಮ ಪೊಲೀಸ್ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿ ಮಣ್ಣು ಮಾಫಿಯಾವನ್ನು ನಿಲ್ಲಿಸಿ, ಅಕ್ರಮ ಮಣ್ಣು ಸಾಗಾಣಿಕೆಯಲ್ಲಿ ಭಾಗಿಯಾದವರ ವಿರುದ್ಧ ಶಿಸ್ತು ಕ್ರಮಕ್ಕೆ ಸೂಚಿಸುತ್ತೇನೆ.

**– ಡಾ. ಭೀಮಾಶಂಕರ ಗುಳೇದ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ**

ನದಿಯ ದಡದಲ್ಲಿನ ಮಣ್ಣು ತೆಗೆದು ಬೇರೆ ಕಡೆಗೆ ಸಾಗಾಣಿಕೆ ಮಾಡುವುದು ಕಾನೂನು ಬಾಹಿರ. ಈ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು-ಕೊಂಡು ಅಕ್ರಮ ಮಣ್ಣು ಸಾಗಾಣಿ-ಕೆಗೆ ಕಡಿವಾಣ ಹಾಕಲು ತಹಶೀಲ್ದಾರ್ ಅವರಿಗೆ ಸೂಚನೆ ನೀಡಲಾಗುವುದು.

**– ಎಸ್.ಎಸ್. ಸಂಪಗಾವಿ, ಉಪ ವಿಭಾಗಾಧಿಕಾರಿ, ಚಿಕ್ಕೋಡಿ.**

# ಐಎಎಸ್‌ನಲ್ಲಿ 100 ರ್‍ಯಾಂಕ ಪಡೆದ ಬಿಪ್ಸ ಶಾಲೆ ವಿದ್ಯಾರ್ಥಿ ವಿಜೇತಾಗೆ ಸನ್ಮಾನ



**ಬಾಗಲಕೋಟೆ :** ಬಿ.ವಿ.ವಿ.ಸಂಘದ ಬಿಪ್ಸ್ ಸ್ಕೂಲಿನಲ್ಲಿ 3ನೇ ತರಗತಿಯಿಂದ 10 ನೇ ತರಗತಿಯವರೆಗೆ (2007-2012) ವ್ಯಾಸಂಗ ಮಾಡಿದ ವಿದ್ಯಾರ್ಥಿನಿ ಸದ್ಯ ಯುಪಿಎಸ್‌ಸಿ ಪರಿಕ್ಷೇಯಲ್ಲಿ ಇಡಿ ಭಾರತದಲ್ಲಿ 100ನೇ ರ್‍ಯಾಂಕ್ ಪಡೆದಿದ್ದು ಸಂತೋಷದ ಸಂಗತಿಯಾಗಿದ್ದು, ಇಂದು ಸಂಘದ ಕಾರ್ಯಾಲಯದಲ್ಲಿ ಬಿ.ವಿ.ವಿ. ಸಂಘದ ಕಾರ್ಯಾಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ವಿಜೇತಾ ಹೊಸಮನಿ ವಿದ್ಯಾರ್ಥಿನಿಗೆ ಸನ್ಮಾನಿಸಿ ಗೌರವಿಸಿದರು. ಈ ಸಂದರ್ಭದಲ್ಲಿ ಬಿ.ವಿ.ವಿ.ಸಂಘ ಮುಖ್ಯಸಲಹೆಗಾರರಾದ ಡಾ.ಮೀನಾ ಚಂದಾವರಕರ, ಶಾಲಾ ಕಾಲೇಜು ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಮಹಾಂತೇಶ ಶೆಟ್ಟರ, ಬಿಪ್ಸ್ ಶಾಲೆಯ ಪಾಚಾರ್ಯ ಸಿ.ಬಿ.ಸುರೇಶ ಹೆಗ್ಡೆ ಇದ್ದರು.

# ಹವಾಮಾನ ಆಧಾರಿತ ವಿಮೆ ಯೋಜನೆ

**ಬಾಗಲಕೋಟೆ :** ಪ್ರಸಕ್ತ ಸಾಲಿನ ಮುಂಗಾರು ಹಂಗಾಮಿಗಾಗಿ ಜಿಲ್ಲೆಯ 9 ತಾಲೂಕುಗಳ ಅಧಿಸೂಚಿತ ಹೋಬಳಿ, ಗ್ರಾಮ ಪಂಚಾಯತ ಹಾಗೂ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದ್ರಾಕ್ಷಿ ಮತ್ತು ದಾಳಿಬೆ ಬೆಳೆಗಳಿಗೆ ಮರು ವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆವಿಮೆ ಯೋಜನೆಯನ್ನು ಘೋಷಿಸಲಾಗಿದೆ. ಬ್ಯಾಂಕ್ ಮೂಲಕ ಸಾಲ ಪಡೆದ ರೈತರು ಸಂಬಂಧಿಸಿದ ಬ್ಯಾಂಕ್ ಶಾಖೆಗಳಲ್ಲಿ ಹಾಗೂ ಸಾಲ ಪಡೆಯದ ರೈತು ಹತ್ತಿರದ ಸಿಎಸ್‌ಸಿ ಕೇಂದ್ರ, ಗ್ರಾಮ ಒನ್ ಕೇಂದ್ರ ಅಥವಾ ಬ್ಯಾಂಕ್ ಖಾತೆ ಹೊಂದಿರುವ ಬ್ಯಾಂಕ್‌ಗಳಲ್ಲಿ ವಿಮೆ ಕಂತು ತುಂಬಬಹುದಾಗಿದೆ. ಪ್ರತಿ ಹೆಕ್ಟೆರ ದಾಳಿಂಬೆಗೆ ರೂ.7650 ಹಾಗೂ ದ್ರಾಕ್ಷಿ ಬೆಳೆಗೆ ರೂ.14 ಸಾವಿರ ವಿಮೆ ಕಂತು ನಿಗದಿಪಡಿಸಲಾಗಿದೆ. ರೈತರು ವಿಮೆ ಕಂತು ಪಾವತಿಸಲು ಜುಲೈ 31 ಕೊನೆಯ ದಿನವಾಗಿದ್ದು, ರೈತರು ಸದರಿ ಯೋಜನೆಯ ಲಾಭ ಪಡೆಯುವಂತೆ ತೋಟಗಾರಿಕೆ ಉಪನಿರ್ದೇಶಕ ರವೀಂದ್ರ ಹಕಾಟೆ ತಿಳಿಸಿದ್ದಾರೆ.

# ಅರ್ಜಿ ಆಹ್ವಾನ

**ಬಾಗಲಕೋಟೆ :** ಕರ್ನಾಟಕ ರಾಜ್ಯ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘ ಬೆಂಗಳೂರು ಬಾಗಲಕೋಟ ತಾಲೂಕ ಘಟಕ ಬಣಜಿಗ ಸಮಾಜದ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಪ್ರತಿ ವರ್ಷದಂತೆಈವರ್ಷವೂಪ್ರತಿಭಾ ಪುರಸ್ಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ.

2023 2024 ನೇ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಹಾಗೂ ಪಿಯುಸಿಯಲ್ಲಿಶೇಕಡ90ಹಾಗೂ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾದವರಿಗೆ ಹಾಗೂವಿಶೇಷವಾಗಿಪದವಿಯಲ್ಲಿ ಸ್ನಾತಕೋತರದಲ್ಲಿ ಬಂಗಾರದ ಪದಕ ಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಡಾಕ್ಟರೇಟ್ ಪಡೆದ ಮಹನೀಯರನ್ನು ಸನ್ಮಾನಿಸಲಾಗುತ್ತಿದ್ದು ಇದಕ್ಕಾಗಿ ಅರ್ಹರಾದವರು ಅಥವಾ ಅವರ ಪಾಲಕರು ಸಂಬಂಧಿಕರು ಸಂಘಟಕರನ್ನು ನಿಗದಿತ ಸಮಯದಲ್ಲಿ ಅಂದರೆ ದಿನಾಂಕ. 15/07/2024 ಒಳಗೆ ಸಂಪರ್ಕಿಸಿ ಒಂದು ಭಾವಚಿತ್ರ ಹಾಗೂ ಅಂಕಪಟ್ಟಿಯ ನಕಲನ್ನು ತಮ್ಮ ಮೊಬೈಲ್ ನಂಬರ್ ನೊಂದಿಗೆ ಸಲ್ಲಿಸಬೇಕು ಶೇಕಡ 90% ಹಾಗೂ ಅದಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿಜ್ಞಾನ ವಿಭಾಗದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಶೇಕಡಾ 80ಕ್ಕಿಂತ ಹೆಚ್ಚು ಅಂಕವನ್ನು ಪಡೆದಂತಹ ಕಲಾ ಮತ್ತು ವಾಣಿಜ್ಯ ವಿಷಯದ ವಿದ್ಯಾರ್ಥಿ ವಿದ್ಯಾರ್ಥಿನಿಯರು ಬೇರೆಬೇರೆಯಾಗಿ ಪ್ರತಿ ವಿಭಾಗದಲ್ಲೂ ಮೂರು ವಿದ್ಯಾರ್ಥಿಗಳನ್ನು ಸನ್ಮಾನಿಸ ಲಾಗುವುದು ಎಂದು ತೀರ್ಮಾನಿಸಲಾಗಿದೆ.

ಹೆಚ್ಚಿನಮಾಹಿತಿಗಾಗಿಸಂಘಟಕರು ಅಶೋಕ್ ಎಸ್ ಚೆನ್ನಿಗಾವಿ 7975859476, ಪ್ರಭುಲಿಂಗೇಶ್ವರ ಚಿಟ್‌ಫಂಡ್ ಆಫೀಸ್ ಬಸವೇಶ್ವರ ಸರ್ಕಲ್‌ರೋಡ್,ಬಾಗಲಕೋಟ, ಬಸವರಾಜು ತಿಪ್ಪಶೆಟ್ಟಿ. 9901811370, ಶಿವಬಸಪ್ಪ ಬಿ ಕರಿಭಾಶೆಟ್ಟಿ9945765489 ಇವರ ಹತ್ತಿರ ತಮ್ಮ ದಾಖಲೆಗಳನ್ನು ಸಲ್ಲಿಸಲು ತಿಳಿಸಿದ್ದಾರೆ.

# ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ಬೆಳಗಾವಿಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ




**ಬೆಳಗಾವಿ :** ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ 187 ಕೋಟಿ ರೂ. ಅವ್ಯವಹಾರ ಖಂಡಿಸಿ ಬೆಳಗಾವಿಯಲ್ಲಿ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿ, ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರುರಾಜೀನಾಮೆನೀಡುವಂತೆಆಗ್ರಹಿಸಿದರು. ನಗರದಸರ್ದಾರ್‌ಮೈದಾನದಿಂದಜಿಲ್ಲಾಧಿಕಾರಿ ಕಚೇರಿವರೆಗೆ ಬಿಜೆಪಿ ರಾಜ್ಯ ಉಪಾಧ್ಯಕ್ಷ ಅನಿಲ್ ಬೆನಕೆ ನೇತೃತ್ವದಲ್ಲಿ ಪ್ರತಿಭಟನೆ ರ್‍ಯಾಲಿ ನಡೆಸಲಾಯಿತು. ಈ ವೇಳೆ, ಸಿಎಂ ಸಿದ್ದರಾಮಯ್ಯ, ಮಾಜಿ ಸಚಿವ ನಾಗೇಂದ್ರ ಅವರ ಭಾವಚಿತ್ರಗಳನ್ನು ಪ್ರದರ್ಶಿಸಿ, ದಲಿತರಿಗೆ ಅನ್ಯಾಯ ಮಾಡಿದ ಭ್ರಷ್ಟ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರ ಎಂದು ಕಾರ್ಯಕರ್ತರು ಘೋಷಣೆ ಕೂಗಿದರು.ಸಿಎಂಸಿದ್ದರಾಮಯ್ಯರಾಜೀನಾಮೆ ಕೊಡುವಂತೆ ಒತ್ತಾಯಿಸಿದರು. ಡಿಸಿ ಕಚೇರಿ ಆವರಣದಲ್ಲಿ ಬ್ಯಾರಿಕೇಡ್ ಹಾಕಲಾಗಿತ್ತು. ಕಚೇರಿಗೆ ಮುತ್ತಿಗೆ ಹಾಕಲು ಬಂದ ಬಿಜೆಪಿ ಕಾರ್ಯಕರ್ತರನ್ನು ಈ ವೇಳೆ ಪೊಲೀಸರು ತಡೆದರು.

ಅನಿಲ್ ಬೆನಕೆ ಮಾತನಾಡಿ, ವಾಲ್ಮೀಕಿ ಅಭಿವೃದ್ಧಿ ನಿಗಮದ ಅನುದಾನವನ್ನು ಚುನಾವಣೆಗೆ ಕಾಂಗ್ರೆಸ್ ಸರ್ಕಾರ ಬಳಸಿದೆ. ಡೆತ್ ನೋಟ್‌ನಲ್ಲಿ ಮಂತ್ರಿಗಳ ಹೆಸರಿದ್ದರೂ ಸಹ ಎಫ್‌ಐಆರ್ ಆಗಿಲ್ಲ.ಕೇವಲರಾಜೀನಾಮೆಪಡೆದುಬಿಟ್ಟಿದ್ದಾರೆ. ಇದೇ ವಿಚಾರಕ್ಕೆ ಈಗಾಗಲೇ ಒಂದು ವಿಕೆಟ್ ಬಿದ್ದಿದೆ.ಈಪ್ರಕರಣದಲ್ಲಿಹಲವರಕೈವಾಡವಿದ್ದು, ಆ ವಿಕೆಟ್‌ಗಳು ಕೂಡ ಬೀಳಬೇಕು ಎಂದು ಆಗ್ರಹಿಸಿದರು.

ಮಾಜಿಶಾಸಕಸಂಜಯಪಾಟೀಲಮಾತನಾಡಿ, ದಲಿತರು, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಬಗ್ಗೆ ದೊಡ್ಡ ಭಾಷಣ ಮಾಡಿ ಅಧಿಕಾರಕ್ಕೆ ಬಂದ ಸಿದ್ದರಾಮಯ್ಯ ಅವರಿಗೆ ದ್ರೋಹ ಬಗೆದಿದ್ದಾರೆ. ಲೂಟಿ ಮಾಡಿದ ಆ 187 ಕೋಟಿ ರೂ. ಹಣವನ್ನು ತೆಲಂಗಾಣದ ಚುನಾವಣೆಯಲ್ಲಿ ಬಳಸಿಕೊಂಡಿದ್ದಾರೆ. ಹಾಗಾಗಿ,ಈಸರ್ಕಾರವನ್ನುಮನೆಗೆಕಳುಹಿಸಲು ಬೀದಿಗಿಳಿದು ಬಿಜೆಪಿ ಪ್ರತಿಭಟಿಸುತ್ತಿದೆ ಎಂದರು.

ರಾಜ್ಯ ಬಿಜೆಪಿ ವಕ್ತಾರ ಎಂ.ಬಿ.ಜೀರಲಿ ಮಾತನಾಡಿ,ಆತ್ಮಹತ್ಯೆಮಾಡಿಕೊಂಡಅಧಿಕಾರಿ ಡೆತ್ ನೋಟ್‌ನಲ್ಲಿ ನಾಗೇಂದ್ರ ಅವರ ಹೆಸರು ಬರೆದಿದ್ದರೂ ಕೂಡ ಈವರೆಗೆ ರಾಜ್ಯ ಸರ್ಕಾರ ಅವರವಿರುದ್ಧಎಫ್‌ಐಆರ್‌ದಾಖಲಿಸಿಲ್ಲ.ಕಲಂ 302, 307 ಅಡಿ ನಾಗೇಂದ್ರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸುವಂತೆ ಒತ್ತಾಯಿಸಿದರು.

ಬಳಿಕ ಬಿ.ನಾಗೇಂದ್ರ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಜಿಲ್ಲಾಡಳಿತದಮೂಲಕರಾಜ್ಯಪಾಲರಿಗೆಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಶಾಸಕ ವಿಠಲ ಹಲಗೇಕರ್,ಮಾಜಿಶಾಸಕರಾದಮಹಾದೇವಪ್ಪ ಯಾದವಾಡ, ಡಾ. ವಿಶ್ವನಾಥ ಪಾಟೀಲ, ಮಹಾಂತೇಶ ದೊಡ್ಡಗೌಡರ, ಗ್ರಾಮೀಣ ಬಿಜೆಪಿ ಜಿಲ್ಲಾಧ್ಯಕ್ಷ ಸುಭಾಷ ಪಾಟೀಲ, ಮಹಾನಗರ ಜಿಲ್ಲಾಧ್ಯಕ್ಷೆಗೀತಾ ಸುತಾರ, ಮುರುಘೇಂದ್ರಗೌಡ ಪಾಟೀಲ, ರುದ್ರಣ್ಣ ಚಂದರಗಿ ಸೇರಿ ಮತ್ತಿತರರು ಇದ್ದರು.

# ವಸತಿ ಶಾಲೆಗಳ ಖಾಲಿ ಸ್ಥಾನಗಳ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕೊಪ್ಪಳ :** ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕೊಪ್ಪಳ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವಸತಿ ಶಾಲೆಗಳಲ್ಲಿ 2024-25ನೇ ಸಾಲಿಗೆ 7, 8 ಹಾಗೂ 9ನೇ ತರಗತಿಗಳಲ್ಲಿ ಖಾಲಿ ಇರುವ ಸ್ಥಾನಗಳ ಪ್ರವೇಶಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕೊಪ್ಪಳ ಜಿಲ್ಲೆಯ ವಸತಿ ಶಾಲೆಗಳಲ್ಲಿ ಪ್ರಸಕ್ತ ಸಾಲಿನ 7, 8 & 9ನೇ ತರಗತಿ (7ನೇ ತರಗತಿ-02 (ಪ.ಜಾ-01(ಹೆಣ್ಣು), 2ಬಿ-01(ಗಂಡು) ಸ್ಥಾನಗಳು, 8ನೇ ತರಗತಿ-09 (ಪ.ಜಾ-02(ಹೆಣ್ಣು), ಪ.ವ.-02(ಗಂಡು), ಪ್ರ.ವ-1-01(ಹೆಣ್ಣು),2ಎ-01(ಗಂಡು) & 01(ಹೆಣ್ಣು), 3ಎ-01(ಗಂಡು) &01(ಹೆಣ್ಣು) ಸ್ಥಾನಗಳು ಹಾಗೂ 9ನೇ ತರಗತಿ-12 ಪ.ಜಾ.-01(ಗಂಡು) & 04(ಹೆಣ್ಣು), ಪ.ವ-01(ಹೆಣ್ಣು), ಪ್ರ.ವ-1(ಹೆಣ್ಣು), 2ಎ-03(ಗಂಡು) & 02(ಹೆಣ್ಣು), ಸ್ಥಾನಗಳು)ಗಳಲ್ಲಿ ಖಾಲಿಯಿರುವ ಸ್ಥಾನಗಳನ್ನು ಮೇರಿಟ್ ಮತ್ತು ಮೀಸಲಾತಿ ಆಧಾರದ ಮೇಲೆ ಭರ್ತಿ ಮಾಡಲಾಗುತ್ತಿದೆ.

ಅರ್ಜಿ ಸಲ್ಲಿಸಲು ವಿದ್ಯಾರ್ಥಿಯು ಕೊಪ್ಪಳ ಜಿಲ್ಲೆಯ ಯಾವುದೇ ಸರ್ಕಾರಿ, ಅನುದಾನಿತ/ಅನುದಾನ ರಹಿತ ಶಾಲೆಗಳಲ್ಲಿ ಪ್ರವೇಶ ತರಗತಿಯ ಹಿಂದಿನ ವರ್ಷದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1ಕ್ಕೆ ಆದಾಯ ಮಿತಿ 2.5 ಲಕ್ಷದೊಳಗಿರಬೇಕು ಹಾಗೂ 2-ಎ, 2-ಬಿ, 3-ಎ, 3-ಬಿ ವರ್ಗದವರಿಗೆ ಆದಾಯ ಮಿತಿ 1 ಲಕ್ಷದೊಳಗಿರಬೇಕು. 9ನೇ ತರಗತಿಗೆ ಪ್ರವೇಶ ಬಯಸುವ ವಿದ್ಯಾರ್ಥಿಗಳು ಹಿಂದಿನ ತರಗತಿಯಲ್ಲಿ ಆಂಗ್ಲ ಮಾಧ್ಯಮದಲ್ಲಿಯೇ ಅಭ್ಯಾಸ ಮಾಡಿದವರಿಗೆ ಮೊದಲ ಆಧ್ಯತೆ ನೀಡಲಾಗುವುದು. ಕೊಪ್ಪಳ ಜಿಲ್ಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಶಾಲೆಗಳನ್ನು ಹೊರತುಪಡಿಸಿ, ಉಳಿದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿಗಳ ಪೋಷಕರು ತಮ್ಮ ಹತ್ತಿರದ ಯಾವುದೇ ವಸತಿ ಶಾಲೆಗಳಲ್ಲಿ ಅರ್ಜಿ ಪಡೆದು ಭರ್ತಿ ಮಾಡಿ, ಹಿಂದಿನ ವರ್ಷದ ಅಂಕಪಟ್ಟಿ, ಜಾತಿ & ಆದಾಯ ಪ್ರಮಾಣ ಪತ್ರದ ಪ್ರತಿ, ವಿಶೇಷ ವರ್ಗಕ್ಕೆ ಸೇರಿದ್ದಲ್ಲಿ ಸಕ್ಷಮ ಪ್ರಾಧಿಕಾರದಿಂದ ನೀಡಲಾದ ಪ್ರಮಾಣ ಪತ್ರ, 2 ಭಾವಚಿತ್ರ ಹಾಗೂ ವಿದ್ಯಾರ್ಥಿಯ ಆಧಾರ್ ಕಾರ್ಡ್ ಪ್ರತಿಯೊಂದಿಗೆ ಜುಲೈ 03ರ ಸಂಜೆ 5 ಗಂಟೆಯೊಳಗೆ ಅರ್ಜಿ ಸಲ್ಲಿಸಬಹುದಾಗಿದೆ ಎಂದು ಕೊಪ್ಪಳ ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅವಳಿ ನಗರದಲ್ಲಿ ವಟವೃಕ್ಷಕ್ಕೆ ವಿಶೇಷ ಪೂಜೆ

**ರಬಕವಿ :** ಕಾರಹುಣ್ಣಿಮೆ ದಿನದಂದು ಸಂಪ್ರದಾಯಬದ್ಧವಾಗಿ ಅವಳಿ ನಗರದಲ್ಲಿ ಸಾವಿರಾರು ಮಹಿಳೆಯರು ವಟವೃಕ್ಷಕ್ಕೆ ಪೂಜೆ ಸಲ್ಲಿಸುವುದರ ಮೂಲಕ ವಟಸಾವಿತ್ರಿ ವೃತವನ್ನು ಸಂಪನ್ನಗೊಳಿಸಲಾಯಿತು.

ಶುಕ್ರವಾರ ಬೆಳಗಿನಿಂದಲೇ ನಗರದ ಜಿಎಲ್‌ಬಿಸಿ ಆವರಣ, ಚಾವಡಿಗಲ್ಲಿ, ರಾಂಪುರ ಸಿಎಂಸಿ ಎದುರಿಗೆ, ಬನಹಟ್ಟಿ ನಗರದ ಅನೇಕ ಕಡೆಗಳಲ್ಲಿ ವಟವೃಕ್ಷಕ್ಕೆ ಮುತ್ತೈದೆಯರು ವಿಶೇಷ ಪೂಜೆ ಸಲ್ಲಿಸಿದರು. ನಂತರ ವೃಕ್ಷಕ್ಕೆ ನೂಲಿನ ದಾರದಿಂದ ಗಿಡಕ್ಕೆ ಪ್ರದಕ್ಷಿಣೆ ಹಾಕಿ ತಮ್ಮ ಇಷ್ಟಾರ್ಥಗಳನ್ನು ಈಡೇರಿಸುವಂತೆ ಭಕ್ತಿಯಿಂದ ಬೇಡಿಕೊಂಡರು. ಪ್ರದಕ್ಷಣೆಯ ನಂತರ ಎಲ್ಲ ಮುತ್ತೈದೆಯರಿಗೆ ಉಡಿ ತುಂಬಿ ಅರಿಶಿಣ ಕುಂಕುಮ ವಿನಿಮಯ ಮಾಡಿಕೊಂಡರು.

ಸತ್ಯವಾನ ಸಾವಿತ್ರಿ ಪ್ರತೀಕವೇ ಈ ವಟವೃಕ್ಷವಾಗಿದೆ ಎಂಬ ಬಲವಾದ ನಂಬಿಕೆ ನಮ್ಮ ಭಾರತೀಯ ಸಂಪ್ರದಾಯದಲ್ಲಿ ಇರುವುದರಿಂದ, ಆದಿ ಕಾಲದಿಂದಲೂ ಈ ವೃಕ್ಷಕ್ಕೆ ಮಹಿಳೆಯರು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಪೂಜೆ ಸಲ್ಲಿಸುತ್ತಾರೆ. ಈ ವೃಕ್ಷವನ್ನು ಈ ಮಾಸದಲ್ಲಿ ಪೂಜೆ ಸಲ್ಲಿಸುವುದರಿಂದ ತಮ್ಮ ತಾಳಿಯ ಬಾಗ್ಯ ಗಟ್ಟಿಯಾಗಿ ತಮ್ಮ ಗಂಡಂದಿರ ಆಯುಷ್ಯ ಕೂಡಾ ವೃದ್ಧಿಯಾಗುತ್ತದೆ ಎಂಬ ಪುರಾತನ ಕಾಲದಿಂದಲೂ ನಂಬಿಕೊಂಡು ಬಂದ ನಂಬಿಕೆ ಆಗಿರುವುದರಿಂದ ಈ ಆಲದ ಮರಕ್ಕೆ ಮುತ್ತೈದೆಯರು ಹೆಚ್ಚು ಪೂಜೆ



ಸಲ್ಲಿಸುತ್ತಾರೆ ಎಂದು ರಾಯರ ಆರಾಧಕರಾದ ಅನಂತ ಪುರೋಹಿತ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಮಹಿಳೆಯರಾದ ಸ್ವಾತಿ ನ್ಯಾಮಗೌಡ, ಪ್ರಭಾ ಕೋಟ್ಯಾಳ, ಪ್ರೀತಿ ಗಾಳಿ, ರಾಜೇಶ್ವರಿ ವಸ್ತ್ರದ, ಪ್ರಿಯಾಂಕಾ ತೇಜಪ್ಪಗೋಳ, ದಿವ್ಯಾ ವಸ್ತ್ರದ, ಸುನಂದಾ ಜಾಮಗೌಡ, ಸುರೇಖಾ ತೇಜಪ್ಪಗೋಳ, ಮಹಾದೇವಿ ಹನಗಂಡಿ, ರಶ್ಮಿ ನಾಯಕವಾಡಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಸಂಭ್ರಮದ ಹನುಮಾನ ದೇವರ ಓಕಳಿ ಹಾಗೂ ಜಾತ್ರಾ ಮಹೋತ್ಸವ



**ಬನಹಟ್ಟಿ :** ಪ್ರತಿ ವರ್ಷದಂತೆ ಈ ವರ್ಷವೂ ಶನಿವಾರ ಇಲ್ಲಿನ ನಾಮದೇವ ಗಲ್ಲಿಯಲ್ಲಿ ಕಾರ ಹುಣ್ಣಿಮೆ ನಿಮಿತ್ಯ ಹನುಮಾನ ದೇವರ ಓಕಳಿ ಹಾಗೂ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ಜರುಗಿತು.

ನಗರದ ತುಂಬೆಲ್ಲ ಹನುಮಾನ ದೇವರ ಪಲ್ಲಕ್ಕಿ ಉತ್ಸವ ಹಾಗೂ ಭಾವಚಿತ್ರದ ಮೆರವಣಿಗೆ ಸಕಲ ವಾದ್ಯ ಮೇಳದೊಂದಿಗೆ ನಡೆಯಿತು.

ನಂತರ ಹೊಂಡದ ಪೂಜೆಯೊಂದಿಗೆ ನೀರೋಕಳಿ ಕಾರ್ಯಕ್ರಮ ನಡೆಯಿತು.

ಈ ಸಂದರ್ಭದಲ್ಲಿ ಈರಣ್ಣ ಹೊನವಾಡ, ಕುಮಾರ ಬಕರೆ, ನಾಗಪ್ಪ ಬಕರೆ, ಗಿರೀಶ ಹಾಸೀಲಕರ, ವಾಸು ಕೋಪರ್ಡೆ, ಶ್ರೀಶೈಲ ಗಣೇಶನವರ, ರಾಮು ಕೋಪರ್ಡೆ, ವಸಂತ ಕೋಪರ್ಡೆ, ಮುಕುಂದ ಕೋಪರ್ಡೆ, ಗಂಗಪ್ಪ ಗೋಂದಕರ, ಬಾಳು ಗಣೇಶನವರ, ಮಾದೇವ ಭಸ್ಮೆ, ರಾಜು ಬಂಡಿಗಣಿ, ರಮೇಶ ಬೆಳ್ಳಗಿ, ಕಿರಣ ಭಸ್ಮೆ, ಆತ್ಮಾರಾಮ ಬಕರೆ, ಚಂದು ಗೋಂದಕರ, ಶ್ರೀಶೈಲ ಬಂಡಿಗಣಿ, ಮಹಾಂತೇಶ ಜಾಲಿಕಟ್ಟಿ, ಮಾನಿಂಗ ಕೋಪರ್ಡೆ, ಬಾಳಕೃಷ್ಣ ಹಾಸೀಲಕರ, ಜ್ಯೋತಿಬಾ ಕೋಪರ್ಡೆ ಹನುಮಾನ ದೇವರ ಟ್ರಸ್ಟ್ ಕಮಿಟಿಯ ನೂರಾರು ಜನ ಕಾರ್ಯಕರ್ತರು ಸೇರಿದಂತೆ ಅನೇಕರು ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State